ಬಾಲ್ಯದಿಂದ ಸ್ವಂತಿಕೆಯ ಬೆಳವಣಿಗೆಯ ಕ್ರಮ

'ಸ್ವಂತಿಕೆ' ಹೊಸ ಅರಿವು

ನಮ್ಮನ್ನು ಹುಡುಕಿ ಕೊಳ್ಳುವ ಪ್ರಯತ್ನದಲ್ಲಿ ಕಂದು ಬಣ್ಣದ ಹುಡುಗಿಯರಾದ ನಾವು ಪೋಷಾಕುಗಳ ಮೂಲಕ ಅದನ್ನು ಸಾಧಿಸಿ ಕೊಳ್ಳುತ್ತೇವೆ. ಈ ಸಂಪ್ರದಾಯದಲ್ಲಿ ಅನುಕರಣೆ, ವಿಡಂಬನೆಯ ಮೂಲಕವೇ ನಮ್ಮ ತಾಯಂದಿರು ಎದುರಿಸುವ ಕಟು ವಾಸ್ತವಗಳನ್ನು ಅರ್ಥ ಮಾಡಿ ಕೊಳ್ಳುತ್ತೇವೆ. ಅವರ ಬಣ್ಣ ರಹಿತ ಬದುಕಿನ ಕಟು ಸತ್ಯಗಳನ್ನು ಅರಿತು ಕೊಳ್ಳುತ್ತೇವೆ. ನಿತ್ಯದ ವಸ್ತ್ರಗಳನ್ನು ಧರಿಸುತ್ತೇವೆ, ಹರಿದ ಚಪ್ಪಲಿಗಳನ್ನು ತೊಡುತ್ತೇವೆ, ಆಪ್ತತೆಯ ಭಾವವನ್ನು ಹೊಂದುತ್ತೇವೆ. ಚಿಕ್ಕವರಿದ್ದಾಗ ಅವರ ಬಟ್ಟೆಗಳನ್ನು ನಮ್ಮ ಶೌಚದಿಂದ ಮಲಿನ ಮಾಡಿದ್ದೇವೆ ಅವರಿಗೆ ತೊಂದರೆ ನೀಡುತ್ತಲೇ ಬೆಳೆದು ದೊಡ್ಡವರಾಗಿದ್ದೇವೆ. ನಂತರ ಅವರ ಕಣ್ಣು ತಿರುಗುವ ಕ್ರಮ, ಕತ್ತು ಅಲ್ಲಾಡುವ ಕ್ರಮ, ನಿತಂಬದ ಚಲನೆಯಲ್ಲಿನ ವೈವಿಧ್ಯತೆ, ನಾಲಿಗೆಯ ಚುರುಕು ಎಲ್ಲವನ್ನೂ ಅನುಕರಿಸುತ್ತೇವೆ.

(ಮೋರ್ಗನ್, 1999, ಪುಟ 29–30)

ಜಾನ್ ಮೋರ್ಗನ್ ಅವರ ಈ ಗ್ರಹಿಕೆ ಬಾಲ್ಯದ ಮಧ್ಯ ಭಾಗದ ಮೊದಲ ವರ್ಷದಲ್ಲಿನ ಎಲ್ಲಾ ಮಕ್ಕಳ ಅನುಭವ ಕೂಡ ಹೌದು. ತಮ್ಮ ತಾಯಿಯ ಹೀಲ್ಡ್ ಚಪ್ಪಲಿಗಳನ್ನು ಧರಿಸುವುದು, ಅವರ ವಸ್ತ್ರಗಳನ್ನು ತೊಡುವುದು ಇದು ಆ ವಯಸ್ಸಿನ ಎಲ್ಲಾ ಮಕ್ಕಳ ಸಾಮಾನ್ಯ ಚಟುವಟಿಕೆ. ಮಾರ್ಗನ್ ಗುರುತಿಸುವ ಈ ಥಳಕು, ಯಶಸ್ಸು ಕೊನೆಗೆ ಅಧಿಕಾರ ಎಲ್ಲವೂ ಎರಿಕ್ ಎರಿಕ್ ಸನ್ ಅವರ ಮಧ್ಯ ಬಾಲ್ಯದ ಸವಾಲುಗಳ ಕುರಿತಂತಹ ಸ್ಪರ್ಧಾತ್ಮಕತೆಯ ಸಿದ್ದಾಂತದ ಹಿನ್ನೆಲೆಯಲ್ಲಿ ಕುತೂಹಲಕರವಾಗಿದೆ. ನೀವು ಮೊದಲ ಅಧ್ಯಾಯದಲ್ಲಿ (ಪುಟ 18) ಕಲಿತಿರುವಂತೆ ಎರಿಕ್ ಸನ್ ಜೀವನದುದ್ದಕ್ಕೂ ಬೆಳವಣಿಗೆ ಎಂದರೆ 'ನಾನು ಯಾರು?' ಎಂಬ ಪ್ರಶ್ನೆಗೆ ಉತ್ತರವನ್ನು ಕಂಡು ಕೊಳ್ಳುವುದೇ ಆಗಿದೆ. ಪ್ರತಿ ಮಾನಸಿಕ ಘಟ್ಟದಲ್ಲಿಯೂ ವ್ಯಕ್ತಿಯು ತಾನಾರು ಎನ್ನುವ ನಿರ್ದಿಷ್ಟ ಸವಾಲನ್ನು ಎದುರಿಸುತ್ತಾನೆ/ಎದುರಿಸುತ್ತಾಳೆ. ಬಾಲ್ಯಾವಸ್ಥೆಯ ಮಧ್ಯ ಘಟ್ಟದಲ್ಲಿ ಮಕ್ಕಳು ತಮ್ಮ ವರ್ತನೆಯಲ್ಲಿ ಪ್ರಬುದ್ದತೆಯನ್ನು ತೋರ ಬೇಕು ಎಂದು ಅಪೇಕ್ಷಿಸಲಾಗುತ್ತದೆ. ಮನೆಯ ವಾತಾವರಣದಲ್ಲಿನ ಅಸಮತೋಲನೆಯನ್ನು ಎದುರಿಸುವುದು ಶಾಲೆಯಲ್ಲಿನ ಸಂಕೀರ್ಣ ಸಮಸ್ಯೆಗಳನ್ನು ಪರಿಹರಿಸುವುದು ಎಲ್ಲದರಲ್ಲೂ ಪ್ರಬುದ್ದತೆಯನ್ನು ನಿರೀಕ್ಷಿಸಲಾಗುತ್ತದೆ. ಇಲ್ಲಿನ ಮುಖ್ಯ ಸವಾಲು ಬದುಕು ವರ್ಸಸ್ ಕೀಳಿರಿಮೆ ಎನ್ನುವುದೇ ಆಗಿದೆ. ಬಾಲ್ಯಾವಸ್ಥೆಯ ಮಧ್ಯಕಾಲಘಟ್ಟದಲ್ಲಿನ ಜೀವನ ಪರತೆ ಸ್ಪರ್ಧಾತ್ಮಕತೆಯೇ ಆಗಿದ್ದು ಅದನ್ನು ಹಿರಿಯರು ಮತ್ತು ಆತ್ಮೀಯ ವಲಯದವರು

ಪರಾಮರ್ಶಿಸುತ್ತಿರುತ್ತಾರೆ. ಈ ಸವಾಲಿನಲ್ಲಿ ಹಿಂದೆ ಬೀಳುವವರು ಕೀಳಿರಿಮೆಯನ್ನು ಬೆಳೆಸಿ ಕೊಳ್ಳುತ್ತಾರೆ. ತಮ್ಮ ಸಾಮರ್ಥ್ಯದ ಕುರಿತು ಅಪನಂಬಿಕೆಯನ್ನು ಹೊಂದಿರುತ್ತಾರೆ. ತಮ್ಮಿಂದ ನಿರೀಕ್ಷಿತ ಸವಾಲುಗಳನ್ನು ಎದುರಿಸಲಾರೆವು ಎಂದು ಭಯ ಪಡುತ್ತಾರೆ.

ಇದರ ಜೊತೆಗೆ ಸ್ಪರ್ಧಾತ್ಮಕತೆಯ ಭಾವವು ಬಾಲ್ಯದ ಮೊದಲ ಹಂತದಿಂದ ಮಧ್ಯದ ಹಂತಕ್ಕೆ ಬರುವಾಗ ಹೆಚ್ಚಾಗಿ ಕಾಡುತ್ತದೆ. ಇದು ತಮ್ಮ ಕುರಿತು ಯೋಚಿಸುವ ಕ್ರಮದ ಮೇಲೆ ಕೂಡ ಪರಿಣಾಮವನ್ನು ಬೀರುತ್ತದೆ. ತಮ್ಮ ಆತ್ಮೀಯ ವಲಯದ ಕುರಿತು ಮೂಡುವ ಹೊಸ ಸಂವೇದನೆ ಮುಖ್ಯವಾಗಿ ಸ್ವಂತಿಕೆಯ ಅರಿವನ್ನು ಹೆಚ್ಚಿಸಿ ಕೊಳ್ಳುವಂತೆ ಮಾಡುತ್ತದೆ.

ಸ್ವಂತಿಕೆಯ ಕುರಿತು ಬದಲಾಗುತ್ತಿರುವ ಪರಿಕಲ್ಪನೆ

ಸಾಕಷ್ಟು ಪ್ರಮಾಣದ ಸಂಶೋಧನೆಗಳು ಗುರುತಿಸಿರುವಂತೆ ಮಕ್ಕಳು ಬಾಲ್ಯದ ಆರಂಭ ಘಟ್ಟದಿಂದ ಮಧ್ಯ ಘಟ್ಟಕ್ಕೆ ಬರುತ್ತಾರೆ ನಂತರ ಹದಿಹರಯಕ್ಕೆ ಕಾಲಿಡುತ್ತಾರೆ. ಈ ಪಯಣದಲ್ಲಿ ಅವರ 'ಸ್ವಂತಿಕೆ'ಯು ಮಹತ್ತರ ಬದಲಾವಣೆಯನ್ನು ಪಡೆದು ಕೊಳ್ಳುತ್ತದೆ. ಸಮಾನಂತರವಾಗಿ ಅವರ ಸಂಜ್ಞಾನಾತ್ಮಕತೆ ಮತ್ತು ಸಾಮಾಜಿಕ ಸ್ವಭಾವಗಳಲ್ಲಿ ಕೂಡ ಬದಲಾವಣೆಗಳು ಉಂಟಾಗುತ್ತವೆ.(ಹಾರ್ಟರ್, 2006ಬಿ; ಮಾಸ್ಕೊಲೋ ಮತ್ತು ಫಿಶರ್, 1998)

ತಮ್ಮ ಕುರಿತ ಪರಿಕಲ್ಪನೆಗಳು ಬೆಳೆಯುತ್ತಾ ಹೋದಂತೆ ಹೇಗೆ ಬದಲಾಗುತ್ತವೆ ಎಂಬುದನ್ನು ಗುರುತಿಸಲು ವಿಲಿಯಂ ಡಾಮಾನ್ ಮತ್ತು ಡೇನಿಯಲ್ ಹಾರ್ಟ್ (1988) 4ರಿಂದ 15 ವರ್ಷದ ಮಕ್ಕಳನ್ನು ತಮ್ಮ ಕುರಿತು ಬಣ್ಣಿಸಲು ಕೇಳಿದರು. ಅವರು ಗುರುತಿಸಿದಂತೆ ಎಲ್ಲರೂ ತಮ್ಮ ಬಾಹ್ಯಚಹರೆಯನ್ನು, ತಮ್ಮ ಚಟುವಟಿಕೆಗಳನ್ನು, ಇತರರೊಂದಿಗಿನ ತಮ್ಮ ಸಂಬಂಧವನ್ನು, ತಮ್ಮ ಮನೋಸ್ಥಿತಿಯನ್ನು ವಿವರಿಸಿದ್ದರು. ಆದರೆ ಬೆಳೆಯುತ್ತಾ ಹೋದಂತೆ ಅವರು ಗುರುತಿಸಿದ ಅಂಶಗಳೂ ಕೂಡ ಬದಲಾದವು. ಇದಕ್ಕೆ ನಕ್ಷೆ 13.1ಅನ್ನು ಗುರುತಿಸ ಬಹುದು.

ಸ್ವಂತಿಕೆಯ ಬೆಳವಣಿಗೆಯ ಮಾದರಿ

ಸ್ವಂತಿಕೆಯ

ನಿರ್ಣಾಯಕ ಅಂಶಗಳು	**ಗುರುತಿಸಿದ ಕ್ಷೇತ್ರಗಳು**
ನಿರ್ಧಾರಾತ್ಮಕ ಗುರುತಿಸುವಿಕೆ	**ಭೌತಿಕ**

(4–7 ವರ್ಷ) ನನಗೆ ನೀಲಿ ಕಣ್ಣುಗಳಿವೆ

ನನಗೀಗ ಆರು ವರ್ಷಗಳು

ಕ್ರಿಯಾತ್ಮಕ

ನಾನು ಬೇಸ್ ಬಾಲ್ ಆಡುತ್ತೇನೆ

ನಾನು ಆಡುತ್ತೇನೆ ಮತ್ತು ಹೆಚ್ಚಾಗಿ ಓದುತ್ತೇನೆ

ಸಾಮಾಜಿಕ

ನಾನು ಕ್ಯಾಥೋಲಿಕ್

ನಾನು ಸಾರೋಹ್‌ನ ಸ್ನೇಹಿತ

ಮಾನಸಿಕ

ನನಗೆ ಕೆಲವೊಮ್ಮೆ ತಮಾಷೆ ಯೋಚನೆಗಳು ಬರುತ್ತವೆ

ನಾನು ಸಂತೋಷವಾಗಿದ್ದೇನೆ

ಸ್ಪರ್ಧಾತ್ಮಕ ವಿಶ್ಲೇಷಣೆ

(8–11 ವರ್ಷ) **ಭೌತಿಕ**

ನಾನು ಬಹುತೇಕ ಮಕ್ಕಳಿಗಿಂತ ಹೆಚ್ಚು ಎತ್ತರವಾಗಿದ್ದೇನೆ

ನಾನು ಸ್ಕೇಡೇವಿಯನ್ ಆಗಿರುವುದರಿಂದ ನನ್ನ ಚರ್ಮ ಕಾಂತಿಯುತವಾಗಿದೆ

ಕ್ರಿಯಾತ್ಮಕ

ನಾನು ಶಾಲೆಯಲ್ಲಿ ಉತ್ತಮ ಸ್ಥಾನ ಪಡೆದಿದ್ದೇನೆ

ನಾನು ಗಣಿತದಲ್ಲಿ ಬುದ್ದಿವಂತ ಆದರೆ ಕಲೆಯ ವಿಷಯಗಳಲ್ಲಿ ಹಿಂದಿದ್ದೇನೆ

ಸಾಮಾಜಿಕ

ನನ್ನ ಬೇಸ್‌ಬಾಲ್ ತಂಡದ ಉತ್ತಮ ಆಟಗಾರರಲ್ಲಿ ನಾನೂ ಒಬ್ಬ

ನನ್ನ ಸೋದರಿಯಂತೆಯೇ ಶಾಲೆಯಲ್ಲಿ ಉತ್ತಮ ಹೆಸರನ್ನು ಪಡೆದಿದ್ದೇನೆ

ಮಾನಸಿಕ

ನಾನು ಬಹುತೇಕ ಮಕ್ಕಳಂತೆಯೇ ಸುಂದರನಾಗಿದ್ದೇನೆ

ನಾನು ಬೇರೆ ಮಕ್ಕಳಿಗಿಂತ ಹೆಚ್ಚು ಬೇಗ ಒತ್ತಡಕ್ಕೆ ಒಳಗಾಗುತ್ತೇನೆ

ಪರಿಣಾಮಗಳ

ವಿಶ್ಲೇಷಣೆ

(12–15 ವರ್ಷ) **ಭೌತಿಕ**

ನಾನು ನಾಲ್ಕು ಕಣ್ಣಿನವನು ಎಂದು ಎಲ್ಲರೂ ಲೇವಡಿ ಮಾಡುತ್ತಾರೆ

ನನಗೆ ಹೊಂಬಣ್ಣದ ಕೂದಲುಗಳಿವೆ ಅದು ಒಳ್ಳೆಯದು ಏಕೆಂದರೆ ಹುಡುಗರು ಹೊಂಬಣ್ಣದವರಾಗಿರುತ್ತಾರೆ

ಕ್ರಿಯಾತ್ಮಕ

ನಾನು ಆಡುತ್ತೇನೆ ಅದು ಒಳ್ಳೆಯದು ಏಕೆಂದರೆ ಹುಡುಗರು ಕ್ರೀಡಾಪಟುವಾಗುವುದನ್ನು ಬಯಸುತ್ತಾರೆ

ಸಾಮಾಜಿಕ

ನನ್ನ ಸಂಕೋಚ ಸ್ವಭಾವದ ಕಾರಣದಿಂದ ನನಗೆ ಹೆಚ್ಚು ಸ್ನೇಹಿತರು ಇಲ್ಲ

ಮಾನಸಿಕ

ನಾನು ಸದಾ ಸ್ನೇಹಿತರ ಜೊತೆ ಇರಲು ಬಯಸುವ ವ್ಯಕ್ತಿ. ಅವರು ನಾನಾಗಿಯೂ ಇರುವುದರಲ್ಲಿ ಸಂತೋಷವನ್ನು ಹೊಂದುವಂತೆ ಮಾಡುತ್ತಾರೆ

ಈ ಪಟ್ಟಿಯಲ್ಲಿ ನಾವು ನೋಡ ಬಹುದಾದಂತೆ ನಾಲ್ಕರಿಂದ ಏಳು ವರ್ಷದೊಳಗಿನ ಮಕ್ಕಳ ಸ್ವಂತಿಕೆಯು ತಮ್ಮ ಕುರಿತ ಸ್ವಂತ ಹೇಳಿಕೆಗಳ ಮೂಲಕ ವ್ಯಕ್ತಗೊಳ್ಳುತ್ತದೆ ಮತ್ತು ಅವು ಸಾಮಾಜಿಕವಾಗಿ ಮನ್ನಣೆ ಪಡೆದ ಮಾದರಿಗೆ ಸೇರಿರುತ್ತವೆ. (ನಾನು ಆರು ವರ್ಷದವನು, ನನಗೆ ನೀಲಿ ಕಣ್ಣುಗಳಿವೆ) 8ರಿಂದ 11 ವರ್ಷದೊಳಗಿನ ಮಕ್ಕಳ ಹೇಳಿಕೆಗಳು ಇತರೊಂದಿಗೆ ಹೋಲಿಕೆಯನ್ನು ಒಳಗೊಂಡಿರುತ್ತವೆ. (ನಾನು ಬೇರೆ ಮಕ್ಕಳಿಗಿಂತ ಎತ್ತರವಾಗಿದ್ದೇನೆ) (ಹೋಲಿಕೆಯು ವ್ಯಕ್ತಿಗತ ವಿಷಯಗಳ ಕುರಿತಾಗಿದ್ದು ಹದಿಹರಯದವರೆಗೂ ಅಸಹಜ ಸಂಗತಿಗಳನ್ನು ಒಳಗೊಂಡಿರುತ್ತದೆ.)

ಮುಂದಿನ ಸಂಶೋಧನೆಗಳು ಸಾಮಾನ್ಯ ಗತಿ ಸೀಮಿತ ನೆಲೆಯ ಸ್ವಂತಿಕೆಯ ಪರಿಕಲ್ಪನೆಗಳಿಂದ ಮೂರ್ತ ಗುಣಲಕ್ಷಣಗಳಿಂದ ಸಾಮಾಜಿಕವಾಗಿ ರೂಪುಗೊಂಡ ಅಮೂರ್ತ ಮತ್ತು ದೃಢ ಅಂಶಗಳ ಕಡೆಗೆ ವಿಶ್ಲೇಷಣೆ ಚಲಿಸುವುದನ್ನು ಗುರುತಿಸಿವೆ. ಇಲ್ಲಿ ತನ್ನ ಆಪ್ತವಲಯ ಮತ್ತು ತನ್ನನ್ನು ಕುರಿತ ಗ್ರಹಿಕೆಗಳು ಮುಖ್ಯವಾಗುತ್ತವೆ. (ಪಾಮರ್ರೋಜ್ ಮತ್ತು ಇತರರು 1995, ಬುಟ್ಲರ್ 2005; ಗೆಸ್ಟ್ 2007).

ಮಧ್ಯ ಬಾಲ್ಯಾವಸ್ಥೆಯ ಕಾಲದಲ್ಲಿ ಸಾಮಾಜಿಕ ಸಂಗತಿಗಳು ಏಕೆ ಮುಖ್ಯ ಪಾತ್ರವನ್ನು ವಹಿಸುತ್ತವೆ ಎನ್ನುವುದು ಸೋಜಿಗದ ಸಂಗತಿಯೇನು ಅಲ್ಲ. ತಮ್ಮ ಸ್ನೇಹ ವಲಯದೊಳಗೆ ಹೆಚ್ಚಿನ ಸಮಯವನ್ನು ಕಳೆಯುವುದು ಇತರರ ದೃಷ್ಟಿಕೋನವನ್ನು ಅರ್ಥ ಮಾಡಿಕೊಳ್ಳಲು ನೆರವಾಗುವುದಲ್ಲದೆ ತಮ್ಮನ್ನು ತಾವು ಪ್ರಶ್ನೆ ಮಾಡಿ ಕೊಳ್ಳಲೂ ಕೂಡ ಕಲಿಸುತ್ತದೆ. ಇದು ಕೆಲವು ನಿರ್ದಿಷ್ಟ ಪ್ರಶ್ನೆಗಳಿಗೆ ಉತ್ತರಿಸಲೂ ಕೂಡ ಕಲಿಸುತ್ತದೆ. ಉದಾಹರಣೆಗೆ 'ನಾನು ಕ್ರೀಡೆಯಲ್ಲಿ ಉತ್ತಮವಾಗಿದ್ದೇನೆಯ?' “ನಾನು ಒಳ್ಳೆಯ ಸ್ನೇಹಿತನೆ' 'ಬೇರೆ ಮಕ್ಕಳು ನನ್ನನ್ನು ಇಷ್ಟ ಪಡುತ್ತಾರೆಯೆ?' 'ನಾನು ಗಣಿತದಲ್ಲಿ ಉತ್ತಮ ಸಾಧನೆ ಹೊಂದಿದ್ದೇನೆಯೆ?' ಇಂತಹ ಪ್ರಶ್ನೆಗಳಿಗೆ ನಿರ್ದಿಷ್ಟ ಉತ್ತರಗಳಿರುವುದಿಲ್ಲ. ಏಕೆಂದರೆ ಯಶಸ್ಸಿಗೆ ನಿಖರ ಮಾನದಂಡಗಳಿರುವುದಿಲ್ಲ. ಬದಲಾಗಿ ಇಲ್ಲಿ ಯಶಸ್ಸು ಇತರ ಸಾಮಾಜಿಕ ಗುಂಪುಗಳೊಂದಿಗೆ ಹೋಲಿಕೆಯಿಂದಲೇ ನಿರ್ಧರಿಸಲ್ಪಡುತ್ತದೆ. ಆದರೆ ಇಂತಹ ಹೋಲಿಕೆಯಿಂದ ದೊರಕುವ ಅರಿವು ಮಕ್ಕಳಿಗೆ ತಮ್ಮ ಕುರಿತು ಒಟ್ಟಾರೆ ಗ್ರಹಿಕೆ ರೂಪಗೊಳ್ಳಲು ಕಾರಣವಾಗುತ್ತದೆ.

ಚಿತ್ರ: ಸಾಮಾಜಿಕ ಹೋಲಿಕೆಯು ಹೆಚ್ಚಾಗಿ ಹೇಗೆ ಸ್ನೇಹಿತರು ಹೋಂವರ್ಕ್ ಮಾಡುತ್ತಾರೆ ಎನ್ನುವುದನ್ನು ಅವಲಂಭಿಸಿರುತ್ತದೆ.

ಮಕ್ಕಳ ಈ ಸಾಮಾಜಿಕ ಹೋಲಿಕೆ ಕ್ರಮೇಣ ಹೆಚ್ಚು ಸಂಕೀರ್ಣ ಮತ್ತು ಸೂಕ್ಷ್ಮವಾಗುತ್ತಾ ಸಾಗುತ್ತದೆ. ಉದ್ದೇಶ ಪೂರ್ವಕ ವೈಯಕ್ತಿಕವಾದ ಸಾಮಾಜಿಕ ಹೋಲಿಕೆಯು ಎಂಟನೇ ವರ್ಷದಲ್ಲಿ ಕಂಡು ಬರುತ್ತದೆ. ಸ್ನೇಹಿತ ವಲಯದಲ್ಲಿನ ಮಾತುಕತೆಯಲ್ಲಿಯೂ ಈ ಹೋಲಿಕೆಯು ಇಣುಕುತ್ತದೆ. 'ನಾನು ಗಣಿತದ ಸಮಸ್ಯೆಗಳನ್ನು ನಿನಗಿಂತ ಬೇಗ ಮುಗಿಸುತ್ತೇನೆ.' 'ನಾನು ವೀಡಿಯೋ ಗೇಮ್‌ನಲ್ಲಿ ನಿನ್ನ ಸ್ಕೋರ್ ಅನ್ನು ಮುರಿಯುವುದಾಗಿ ಬೆಟ್ ಕಟ್ಟುತ್ತೇನೆ.' ಆದರೆ ಕ್ರಮೇಣ ಇಂತಹ ನೇರವಾದ ಹೋಲಿಕೆಗಳು ಋಣಾತ್ಮಕ ಪರಿಣಾಮವನ್ನು ಬೀರುತ್ತದೆ ಎನ್ನುವುದು ಅವರಿಗೆ ಅರ್ಥವಾಗುತ್ತದೆ. ಪ್ರಶ್ನೆಗಳನ್ನು ಕೇಳುವಲ್ಲಿ ಸೂಕ್ಷ್ಮವಾದ ವಿಧಾನವನ್ನು ಅವರು ಬಳಸಲು ಆರಂಭಿಸುತ್ತಾರೆ. 'ನೀನು ಯಾವ ಸಮಸ್ಯೆಯನ್ನು ಬಿಡಿಸುತ್ತಿದ್ದೀಯೆ' 'ನಿನ್ನ ಹೆಚ್ಚಿನ ಸ್ಕೋರ್ ಯಾವ ವಿಷಯದಲ್ಲಿ' ಇಂತಹ ಪ್ರಶ್ನೆಗಳನ್ನು ಕೇಳಲು ಆರಂಭಿಸುತ್ತಾರೆ.

(ಪೊಮೆರಂಜ್ ಮತ್ತು ಇತರರು 1995). ಬಹಳ ಮುಖ್ಯವಾದ ಗಮನಿಸ ಬೇಕಾದ ಸಂಗತಿ ಎಂದರೆ ಪ್ರಕೃತಿಯಲ್ಲಿ ಎಲ್ಲಾ ಹೋಲಿಕೆಗಳೂ ಸ್ಪರ್ಧಾತ್ಮಕವಾಗಿಯೇ ಇರುತ್ತವೆ. ಇದರ ಜೊತೆಗೆ ಮಕ್ಕಳ ಹೋಲಿಕೆಯೂ ಕೂಡ ಆತ್ಮೀಯ ವಲಯದಲ್ಲಿನ ಸ್ಪರ್ಧೆ ಮತ್ತು ಸಾಮಾಜಿಕ ಸಾಮರಸ್ಯವನ್ನು ಅವಲಂಭಿಸಿರುತ್ತದೆ. ಈ ವಿಷಯದ ಕುರಿತು ಈ ಅಧ್ಯಾಯದಲ್ಲಿ ನಂತರ ಚರ್ಚಿಸುತ್ತೇವೆ. (ಗೆಸ್ಟ್ 2007)

ಕೆಲವೊಮ್ಮೆ 7 ಅಥವಾ 8ನೇ ವಯಸ್ಸಿನಲ್ಲಿ ಮಕ್ಕಳು ತಮ್ಮ ಕುರಿತು ಸಾಮಾನ್ಯ ಸ್ಥಿರ ಕುರುಹುಗಳ ಮೂಲಕ ಬಣ್ಣಿಸಿ ಕೊಳ್ಳಲು ಆರಂಭಿಸುತ್ತಾರೆ. 'ನಾನು ಚೆಂಡನ್ನು ದೂರಕ್ಕೆ ಒದೆಯ ಬಲ್ಲೆ' 'ನಾನು ನನ್ನ ಮೂಲ ನೆಲೆಗಳನ್ನು ಬಲ್ಲೆ' ಎಂದು ಹೇಳುವ ಬದಲಾಗಿ. 'ನಾನು ಒಳ್ಳೆಯ ಅಥ್ಲೆಟ್' ಅಥವಾ 'ನಾನು ಸ್ಮಾರ್ಟ್ ಆಗಿದ್ದೇನೆ' ಎಂದು ಚತುರ ಉತ್ತರಗಳನ್ನು ನೀಡುತ್ತಾರೆ. ಬೇರೆಯವರಿಂದಲೂ ಇಂತಹ ಉತ್ತರಗಳನ್ನೇ ಬಯಸುತ್ತಾ ಹೋಗುತ್ತಾರೆ. ಇದನ್ನು ಬೇರೆ ಬೇರೆ ಸನ್ನಿವೇಶಗಳಿಗೆ ವಿಸ್ತರಿಸುತ್ತಾ ಹೋಗುತ್ತಾರೆ. (ಒಲ್ಸನ್ ಮತ್ತು ದ್ವೀಕ್ 2009). ಅಧ್ಯಯನಗಳು ಗುರುತಿಸಿರುವಂತೆ ಬೇರೆಯವರ ಮಾನಸಿಕ ಸ್ಥಿರತೆಯನ್ನು ಗಮನಿಸುವ ಮಕ್ಕಳು ತಮ್ಮ ಕುರಿತೂ ಇಂತಹ ಸ್ಥಿರತೆಯನ್ನೇ ಭಾವಿಸಿ ಕೊಳ್ಳುತ್ತಾರೆ.

ಆತ್ಮ ಗೌರವ

ಸುಸಾನ್ ಹಾರ್ಟರ್ ಅಭಿವೃದ್ಧಿ ಸಂಶೋಧಕರು ಮತ್ತು ಚಿಕಿತ್ಸಕರು ಮಕ್ಕಳ 'ಆತ್ಮ ಗೌರವ'ದ ಬೆಳವಣಿಗೆಯ ಕುರಿತು ವಿಶೇಷ ಸಂಶೋಧನೆಯನ್ನು ನಡೆಸಿದ್ದಾರೆ. (1999). ಅವರ ಸಂಶೋಧನೆಯ ಪ್ರಕಾರ ಆತ್ಮ ಗೌರವವು ಮಾನಸಿಕ ಆರೋಗ್ಯದ ಸೂಚಕವಾಗಿದೆ. ಚಿಕ್ಕಂದಿನಲ್ಲಿನ ಆತ್ಮಗೌರವದ ಕುರಿತ ಹೆಚ್ಚಿನ ಕಾಳಜಿಯು ಮುಂದಿನ ಜೀವನದಲ್ಲಿನ ಸಮಾಧಾನ ಮತ್ತು ಸಂತೋಷಕ್ಕೆ ಸೂಚಕವಾಗಿದೆ. ಅದೇ ರೀತಿಯಲ್ಲಿ ಕಡಿಮೆ ಕಾಳಜಿಯು ಒತ್ತಡ, ಆತಂಕ ಸಾಮಾಜಿಕ ಮತ್ತು ಶಾಲಾ ಜೀವನಗಳಲ್ಲಿನ ರಾಜಿಗೆ ಕಾರಣವಾಗ ಬಲ್ಲದು.

ಮಕ್ಕಳ ಬೆಳವಣಿಗೆಯ ಪರಾಮರ್ಶೆಯ ಅಧ್ಯಯನವು ಬಾಲ್ಯಾವಸ್ಥೆಯ ಆರಂಭಿಕ ಮತ್ತು ಮಧ್ಯ ಘಟ್ಟಗಳಲ್ಲಿನ ಪರಿವರ್ತನೆಯನ್ನು ಗುರುತಿಸಿದೆ. ಹಾರ್ಟರ್ ಮತ್ತು ರಾಬಿನ್ ಪೈಕ್(1984) ಗುರುತಿಸಿರುವಂತೆ 4-5-6 ಮತ್ತು 7ನೇ ವಯಸ್ಸಿನ ಮಕ್ಕಳಿಗೆ ಚಿತ್ರಗಳನ್ನು ತೋರಿಸಿ ಯಾವುದನ್ನು ಹೆಚ್ಚು ಅಥವಾ ಕಡಿಮೆ ಇಷ್ಟ ಪಡುತ್ತೀರಾ ಎನ್ನುವ ಪ್ರಶ್ನೆಯನ್ನು ಕೇಳಲಾಯಿತು. ಪ್ರತಿ ಚಿತ್ರಗಳನ್ನೂ ಆತ್ಮಗೌರವಕ್ಕೆ ಸಂಬಂಧಿಸಿದಂತೆ ನಾಲ್ಕು ಮುಖ್ಯ ಅಯಾಮಗಳನ್ನು ಗುರುತಿಸಲು ಅನುಕೂಲವಾಗುವಂತೆ ನೀಡಲಾಗಿತ್ತು. ಸಂಜ್ಞಾನಾತ್ಮಕ ಸಾಮರ್ಥ್ಯ, ದೈಹಿಕ ಸ್ಪರ್ಧಾತ್ಮಕತೆ, ಆಪ್ತ ಅಂಗೀಕಾರ, ಮಾತೃ ಅಂಗೀಕಾರಗಳನ್ನು ಇಲ್ಲಿ

ಗಮನಿಸಲಾಗಿತ್ತು. ಕಿರಿಯ ಮತ್ತು ಹಿರಿಯ ಮಕ್ಕಳಿಗೆ ಹೋಲಿಸ ಬಲ್ಲ ಅವರ ವಯಸ್ಸಿಗೆ ತಕ್ಕಂತಹ ವಸ್ತುಗಳನ್ನು ನೀಡಲಾಗಿತ್ತು. ಉದಾಹರಣೆಗೆ 'ಅಕ್ಷರಗಳ ಅರಿವು' 4 ಮತ್ತು 5ನೇ ವರ್ಷದ ಮಕ್ಕಳ ಸಂಜ್ಞಾನಾತ್ಮಕ ಗ್ರಹಿಕೆಗೆ ನೀಡದಾಗ ದೊರೆತ ಉತ್ತರಕ್ಕೂ 6 ಮತ್ತು 7ನೇ ವಯಸ್ಸಿನ ಮಕ್ಕಳಿಗೆ ನೀಡದಾಗ ದೊರೆತ ಉತ್ತರಕ್ಕೂ ವ್ಯತ್ಯಾಸಗಳಿದ್ದವು.

ಅವರ ಉತ್ತರಗಳ ವಿಧಾನವನ್ನು ಗಮನಿಸಿದಾಗ ಎರಡು ಮುಖ್ಯ ನೆಲೆಗಳಲ್ಲಿ ಅದನ್ನು ವಿಂಗಡಿಸ ಬಹುದಾಗಿದೆ. ಸಾಮರ್ಥ್ಯ ಮತ್ತು ಸ್ವೀಕಾರಾರ್ಹತೆ ಅಂಕಿ ಅಂಶಗಳು ಗುರುತಿಸುವಂತೆ ಮಕ್ಕಳು ಸಂಜ್ಞಾನಾತ್ಮಕ ಮತ್ತು ದೈಹಿಕ ಸಾಮರ್ಥ್ಯವನ್ನು ಒಂದೆಡೆ ತಂದರೆ ಆಪ್ತ ಸ್ವೀಕಾರ ಮತ್ತು ಮಾತೃ ಸ್ವೀಕಾರವನ್ನು ಇನ್ನೊಂದೆಡೆ ತರುತ್ತಿದ್ದರು. ಅಷ್ಟೇ ಅಲ್ಲದೆ ಈ ಅಧ್ಯಯನವು ಮಕ್ಕಳ ಸ್ವ ಗ್ರಹಿಕೆಯ ಕುರಿತ ಭಾವನೆಗಳನ್ನು ವಾಸ್ತವಿಕ ನೆಲೆಗಟ್ಟಿನಲ್ಲಿ ಗುರುತಿಸುತ್ತದೆ. ಹಾರ್ಟರ್ ಮತ್ತು ಪಿಕ್ ಗುರುತಿಸಿದಂತೆ ಚಿತ್ರಗಳನ್ನು ಗುರುತಿಸಲು ಹಿಂದೆಗೆಯುವ ಮಕ್ಕಳು ಕೀಳಿರಿಮೆಯನ್ನು ಹೊಂದಿರುತ್ತಾರೆ. ಶಾಲೆಗೆ ಹೊಸದಾಗಿ ಬಂದ ಮಕ್ಕಳ ಆಯ್ಕೆ ಕೂಡ ಇಂತಹ ಭಾವವನ್ನೇ ಬಿಂಬಿಸುತ್ತದೆ.

ಸಂಶೋಧನೆಯಲ್ಲಿ ಸ್ವಲ್ಪ ಹಿರಿಯ ವಯಸ್ಸಿನ (8ರಿಂದ 12) ಮಕ್ಕಳನ್ನು ಗಮನಿಸಿದಾಗ ಹಾರ್ಟರ್ (1982) ಆತ್ಮಗೌರವದ ಕುರಿತಂತೆ ಕಳೆಕಂಡ

ನಮೂನೆಯನ್ನು ಬಳಸಿ ಸಂಶೊಧನೆಯನ್ನು ನಡೆಸಿದರು.

ನಿಜವಾಗಿಯೂ ನನ್ನ ಮಟ್ಟಿಗೆ ನಿಜ	---------
ಯಾವ ಮಾದರಿಯ ಸತ್ಯ	----------
ಕೆಲವು ಮಕ್ಕಳು ಆಗಾಗ ತಾವು ಕಲಿತಿದ್ದನ್ನು ಮರೆತು ಬಿಡುತ್ತಾರೆ	
ಆದರೆ	
ಉಳಿದ ಮಕ್ಕಳು ಅದನ್ನೇ ಸುಲಭವಾಗಿ ನೆನಪಿಟ್ಟು ಕೊಳ್ಳುತ್ತಾರೆ.	
ಇದು ಕೆಲಮಟ್ಟಿಗೆ ನನ್ನ ವಿಷಯದಲ್ಲಿ ನಿಜ	-----------
ಇದು ನನ್ನ ಮಟ್ಟಿಗೆ ಸಂಪೂರ್ಣವಾಗಿ ನಿಜ	-----------

ಪಟ್ಟಿ 13.1: ಇದು ಹಾರ್ಟರ್ ಅವರ ಆತ್ಮ ಗೌರವದ ಕುರಿತ ಸಂಶೋಧನೆಯಲ್ಲಿ ಬಳಕೆಯಾದಂತಹ ನಮೂನೆ(ಹಾರ್ಟರ್ 1982)

ಹಾರ್ಟರ್ ಈ ವಯಸ್ಸಿನ ಮಕ್ಕಳು ಹೆಚ್ಚು ವೈವಿಧ್ಯಮಯ ವಿಶ್ಲೇಷಣೆಗಳನ್ನು ನಡೆಸ ಬಲ್ಲರು ಎಂಬುದನ್ನು ಗುರುತಿಸುತ್ತಾರೆ. ಉದಾಹರಣೆಗೆ ಅವರು ಸಂಜ್ಞಾನಾತ್ಮಕ, ಸಾಮಾಜಿಕ, ಮಾನಸಿಕ ನೆಲೆಗಳನ್ನು ಗುರುತಿಸ ಬಲ್ಲರು.(ಹಾರ್ಟರ್ 1987). ಅದೇ ವೇಳೆಯಲ್ಲಿ ಈ ಮಕ್ಕಳ ಆತ್ಮಗೌರವದ ಪರಿಕಲ್ಪನೆ ಕೂಡ ಸಂಕೀರ್ಣವಾಗುತ್ತಾ ಹೋಗುತ್ತದೆ ಎನ್ನವುದನ್ನು ನಾವು ಗಮನಿಸ ಬೇಕು. ಈ ಪರಿಕಲ್ಪನೆಯ ಬೇರೆ ಬೇರೆ ನೆಲೆಗಳನ್ನು ಕೂಡ ಒಟ್ಟಾಗಿಸಿ ಸಮಗ್ರ ಗ್ರಹಿಕೆಯನ್ನು ಹೊಂದ ಬಲ್ಲರು. (ಹಾರ್ಟರ್, 2006) (ಪಟ್ಟಿ 13.2 ಹರಾರೆಯವರ 8ರಿಂದ 12 ವರ್ಷದೊಳಗಿನ ಮಕ್ಕಳ ಕುರಿತ ಬೇರೆ ಬೇರೆ ಆತ್ಮಗೌರವದ ನೆಲೆಯ ಅಡಕಗಳನ್ನು ತೋರಿಸುತ್ತದೆ)

ಪಟ್ಟಿ 13.2

8–12 ವರ್ಷದೊಳಗಿನ ಮಕ್ಕಳಿಗೆ ಹಾರ್ಟರ್ ಆತ್ಮಗೌರವದ ಮಾಪಕ

ಆತ್ಮಗೌರವದ ಕ್ಷೇತ್ರ	ಮಾದರಿ ಅಡಕಗಳು
ಸಂಜ್ಞಾನಾತ್ಮಕ ಸಾಮರ್ಥ್ಯ	ಶಾಲಾ ಅಭ್ಯಾಸದಲ್ಲಿ ಉತ್ತಮ ಸಾಧನೆ, ಉತ್ತರಗಳನ್ನು ಗುರುತಿಸ ಬಲ್ಲರು, ನೆನಪಿಟ್ಟು ಕೊಳ್ಳ ಬಲ್ಲರು, ಓದಿದ್ದು ಚೆನ್ನಾಗಿ ಮನಸ್ಸಿನಲ್ಲಿರುತ್ತದೆ
ಸಾಮಾಜಿಕ ಸಾಮರ್ಥ್ಯ	ಹೆಚ್ಚಿನ ಸ್ನೇಹಿತರನ್ನು ಹೊಂದಿರುವುದು, ಜನಪ್ರಿಯತೆ ಹೊಂದಾಣಿಕೆಯ ಸ್ವಭಾವ, ಮೆಚ್ಚಿಕೊಳ್ಳುವ ಗುಣ
ಭೌತಿಕ ಸಾಮರ್ಥ್ಯ	ಆಟಗಳಲ್ಲಿ ಉತ್ತಮ ಸಾಧನೆಯನ್ನು ತೋರುವುದು, ಕ್ರೀಡೆಯಲ್ಲಿ ನಿಪುಣತೆ, ಆಟಗಳಲ್ಲಿ ಮೊದಲಿಗನಾವುದು
ಸಾರ್ವತ್ರಿಕ ಸ್ವಂತಿಕೆ	ತನ್ನ ಕುರಿತ ನಂಬಿಕೆ, ಉತ್ತಮವಾಗಿ ಕಾರ್ಯನಿರ್ವಹಣೆ ಒಳ್ಳೆಯ ಸ್ವಭಾವ, ಇದನ್ನು ಉಳಿಸಿ ಕೊಳ್ಳುವ ಪ್ರಯತ್ನ

ಮಧ್ಯ ಬಾಲ್ಯಾವಸ್ಥೆಯಲ್ಲಿರುವ ಮಕ್ಕಳು ಈ ಹಂತದಲ್ಲಿ ಬೆಳೆಸಿ ಕೊಳ್ಳುವ ಇನ್ನೊಂದು ಅಂಶವೆಂದರೆ ತಾವು ಇಷ್ಟ ಪಡುವ ವ್ಯಕ್ತಿಯನ್ನು ಅನುಕರಿಸುವುದು. 'ತಾವು ಏನಾಗಿರುತ್ತೇವೆಯೋ' ಅದರ ಬದಲು 'ಮಾದರಿ ವ್ಯಕ್ತಿಯಂತಾಗುವುದು'. ಅವರ ಮಟ್ಟಿಗೆ

ಇಂತಹ ಅನುಕರಣೆಯೇ ವಾಸ್ತವವಾಗಿರುತ್ತದೆ. ಮಕ್ಕಳ ಈ 'ವಾಸ್ತವ' ಮತ್ತು 'ಅನುಕರಣೆ'ಯ ನಡುವಿನ ಅಂತರ ಉತ್ತೇಜನಕಾರಿಯಾಗಿ ಗುಣಾತ್ಮಕ ಕೂಡ ಆಗಿರ ಬಹುದು ಅದೇ ರೀತಿಯಲ್ಲಿ ದಾರಿ ತಪ್ಪುವಂತೆ ಮಾರಕವೂ ಆಗಿರ ಬಹುದು. ಇದು ವ್ಯತ್ಯಾಸದ ಪರಿಣಾಮ ಮತ್ತು ಗುಣಾತ್ಮಕ ನೆಲೆಯನ್ನು ಅವಲಂಭಿಸಿರುತ್ತದೆ.

ಆದರೆ ಎಲ್ಲಾ 'ವಾಸ್ತವ' ಮತ್ತು 'ಅನುಕರಣೆ'ಯ ನಡುವಿನ ಅಂತರವೂ ಮುಖ್ಯವಾಗ ಬೇಕಾಗಿಲ್ಲ. ಉದಾಹರಣೆಗೆ ಉತ್ತಮ ಕ್ರೀಡಾಪಟುವಾಗಬೇಕು ಎಂಬ ಕನಸು ಸಾಮರ್ಥ್ಯವಿಲ್ಲದಿದ್ದರೆ ನನಸಾಗುವುದಿಲ್ಲ. ಮಕ್ಕಳು ಬರೀ ಆದರ್ಶವನ್ನು ಇಟ್ಟು ಕೊಂಡ ಕೂಡಲೇ ಅಂದು ಕೊಂಡಿದ್ದನ್ನು ಸಾಧಿಸಲಾರರು. ಇದಕ್ಕೆ ಪ್ರತಿಲೋಮವಾಗಿ ಕ್ರೀಡಾಪಟುವಾಗುವ ಸಾಮರ್ಥ್ಯವಿರುವ ಮಗು ಯಾರನ್ನೂ ಅನುಕರಿಸದೆ ಕೂಡ ತನ್ನ ಗುರಿಯನ್ನು ತಲುಪ ಬಲ್ಲದು. (ಹಾರ್ಟರ್, 2006ಎ)

ಹಾರ್ಟರ್ ಮತ್ತು ಸಂಗಡಿಗರು ಗುರುತಿಸಿರುವಂತೆ ಮಕ್ಕಳು ತಮ್ಮ ಸ್ನೇಹ ವಲಯವನ್ನು ತಮ್ಮನ್ನು ಗುರುತಿಸುವ ಕ್ರಮ ಕೂಡ ವಯಸ್ಸಿನೊಡನೆ ಬದಲಾಗುತ್ತದೆ. ಚಿಕ್ಕ ವಯಸ್ಸಿನಲ್ಲಿ ಸ್ನೇಹಿತರ ಚುರುಕುತನವನ್ನು ಶಿಕ್ಷಕರ ಪರಾಮರ್ಶೆಯಂತೆಯೇ ಗುರುತಿಸುತ್ತಾರೆ. ಆದರೆ ತಮ್ಮ ಚುರುಕುತನದ ಕುರಿತು ಮಾತ್ರ ಶಿಕ್ಷಕರ, ಸ್ನೇಹಿತರ ಅಭಿಪ್ರಾಯಕ್ಕೆ ಸಹಮತ ಸೂಚಿಸದೆ ತಮ್ಮದೇ ಆದ ನಿಲುವನ್ನು ಹೊಂದುತ್ತಾರೆ. ಅವರು ತಮ್ಮ ಸಾಮರ್ಥ್ಯವನ್ನು ಬಹಳ ಎತ್ತರದಲ್ಲಿ ಗುರುತಿಸಿ ಕೊಳ್ಳುತ್ತಿರುತ್ತಾರೆ. ಎಂಟನೇ ವರ್ಷದ ಹೊತ್ತಿಗೆ ಅವರು ತಮ್ಮನ್ನು ಗುರುತಿಸಿ ಕೊಳ್ಳುವ ಕ್ರಮ ಸ್ನೇಹಿತರು ಮತ್ತು ಶಿಕ್ಷಕರು ಗುರುತಿಸಿ ಕೊಳ್ಳುವುದಕ್ಕೆ ಹತ್ತಿರವಾಗಿರುತ್ತದೆ. ಈ ಫಲಿತಾಂಶವು ಈ ಹಿಂದೆ ಗುರುತಿಸಿದಂತೆ ಎಂಟನೇ ವಯಸ್ಸಿಗೆ ಸ್ವಂತಿಕೆಯನ್ನು ಕಂಡು ಕೊಳ್ಳುವ ಪ್ರಕ್ರಿಯೆ ಆರಂಭವಾಗುತ್ತದೆ ಎನ್ನುವ ಹಿಂದಿನ ಸಂಶೋಧನೆಗೆ ಪೂರಕವಾಗಿದೆ.

ಆತ್ಮಗೌರವದ ಮೂಲಭೂತ ನೆಲೆಗಳು

ಆತ್ಮ ಗೌರವವು ಮಕ್ಕಳ ಪಾಲನೆಯ ವಿಧಾನಗಳನ್ನು ಅವಲಂಭಿಸಿರುತ್ತದೆ. (ಕೂಪರ್ ಸ್ಮಿತ್, 1967; ಹೂಗ್ಸ್ ಇತರರು, 2006). 10–12 ವರ್ಷದೊಳಗಿನ ವಯಸ್ಸಿನ ಹುಡುಗರ ಕುರಿತು ಸಮಗ್ರ ಅಧ್ಯಯನ ನಡೆಸಿದ ಸ್ಟೇನ್ಲಿ ಕೂಪರ್ ಸ್ಮಿತ್ ಹೆಚ್ಚಿನ ಆತ್ಮಗೌರವವನ್ನು ಹೊಂದಿದ ಮಕ್ಕಳ(ಸಮೀಕ್ಷೆ ಲಭಿಸಿದ ಉತ್ತರಗಳಂತೆ ಮತ್ತು ಶಿಕ್ಷಕರ ಪರಾಮರ್ಶೆಯಿಂದ ಗುರುತಿಸಲ್ಪಟ್ಟಂತೆ) ಪೋಷಕರು ಡೈಯಾನ ಬೂಮ್ರಿಂಡ್ ಗುರುತಿಸಿದ (ಅಧ್ಯಾಯ 10, ಪುಟ 349ಅನ್ನು ಗಮನಿಸಿ) ಅಧಿಕಾರಯುತ ಪೋಷಣೆಗೆ ಹೋಲಿಸ ಬಲ್ಲ ಪಾಲನೆಯನ್ನು ನಡೆಸಿರುತ್ತಾರೆ. ಇನ್ನೊಮ್ಮೆ ನೆನಪಿಸಿ ಕೊಳ್ಳ ಬಹುದಾದರೆ ಈ ಮಾದರಿಯಲ್ಲಿ ಪಾಲಕರು ಸಂಪೂರ್ಣ ನಿಯಂತ್ರಣ, ಉತ್ತಮ ನಡವಳಿಕೆಗೆ

ಪ್ರೋತ್ಸಾಹ, ಸ್ವಾತಂತ್ರ್ಯಕ್ಕೆ ಬೆಂಬಲ, ಮಕ್ಕಳ ಜೊತೆಗೆ ಹೆಚ್ಚಿನ ಸಮಯವನ್ನು ಕಳೆಯುವ ಪ್ರಯತ್ನ ಎಲ್ಲದರ ಸಮ್ಮಿಶ್ರ ಮಾದರಿಯ ಪಾಲನೆಯನ್ನು ನೀಡುತ್ತಿರುತ್ತಾರೆ. ಕೂಪರ್ ಸ್ಮಿತ್ ಅವರ ಅಂಕಿ-ಅಂಶಗಳು ಗುರುತಿಸುವಂತೆ ಪೋಷಕರಲ್ಲಿನ ಈ ಮೂರು ಲಕ್ಷಣಗಳು ಮಧ್ಯ ಬಾಲ್ಯಾವಸ್ಥೆಯಲ್ಲಿ ಹೆಚ್ಚಿನ ಆತ್ಮಗೌರವಕ್ಕೆ ದಾರಿ ಮಾಡಿ ಕೊಡುತ್ತದೆ.

1. ***ಹೆತ್ತವರಿಂದ ಮಕ್ಕಳಿಗೆ ಮನ್ನಣೆ***: ಹೆಚ್ಚು ಆತ್ಮ ಗೌರವವನ್ನು ಹೊಂದಿರುವ ಮಕ್ಕಳ ತಾಯಂದಿರು ಕಡಿಮೆ ಆತ್ಮ ವಿಶ್ವಾಸ ಹೊಂದಿರುವ ಮಕ್ಕಳ ತಾಯಂದಿರಿಗಿಂತ ಮಕ್ಕಳ ಜೊತೆ ಹೆಚ್ಚು ಆತ್ಮೀಯ ಒಡನಾಟವನ್ನು ಇಟ್ಟು ಕೊಂಡಿರುತ್ತಾರೆ. ಮಕ್ಕಳು ಈ ಆತ್ಮೀಯತೆಯನ್ನು ಅಮ್ಮಂದಿರ ಪ್ರೋತ್ಸಾಹ ಎಂದೇ ಭಾವಿಸಿತ್ತಾರೆ. ತಾಯಂದಿರ ಆಸಕ್ತಿಯನ್ನು ವೈಯಕ್ತಿಕ ಮನ್ನಣೆ ಎಂದೇ ಭಾವಿಸುತ್ತಾರೆ. ಇದು ಅವರಿಗೆ ಭರವಸೆಯ ನೆಲೆಯಾಗುತ್ತದೆ. 'ವೈಯಕ್ತಿಕ ಅಭಿವ್ಯಕ್ತಿಯನ್ನು ಅವರು ಯಶಸ್ಸು ಎಂದು ಭಾವಿಸುತ್ತಾರೆ. ಬೇರೆಯರಿಗಿಂತಲೂ ನನಗೆ ಹೆಚ್ಚಿನ ಕಾಳಜಿ, ಮನ್ನಣೆ ಸಿಗುವುದು ಅವರಿಗೆ ಬೆಚ್ಚಗಿನ ಭಾವವನ್ನು ಕೊಡುತ್ತದೆ.' (ಕೂಪರ್‌ಸ್ಮಿತ್, 1967, ಪುಟ 179)
2. ***ಪೋಷಕರು ನಿರ್ದಿಷ್ಟ ಮಿತಿಗಳನ್ನು ನೀಡುವುದು***; ಪೋಷಕರು ಖಚಿತವಾಗಿ ಏನು ಮಾಡ ಬೇಕು ಏನು ಮಾಡಬಾರದು ಎನ್ನುವ ಚೌಕಟ್ಟನ್ನು ನೀಡಿದಾಗ ಮಕ್ಕಳಿಗೆ ವಾಸ್ತವಿಕತೆಯ ಅರಿವು ಉಂಟಾಗಿ ಆತ್ಮ ಗೌರವದ ಕುರಿತು ಅವರಿಗೆ ಸ್ಪಷ್ಟ ಕಲ್ಪನೆ ಬರುತ್ತದೆ.
3. ***ವೈಯಕಿಕತೆಗೆ ಪೋಷಕರು ನೀಡುವ ಮಹತ್ವ***: ಪೋಷಕರು ರೂಪಿಸಿದ ಚೌಕಟ್ಟಿನಲ್ಲಿಯೇ ಮಕ್ಕಳಿಗೆ ಮಾನದಂಡಗಳ ಕಲ್ಪನೆ ಮತ್ತು ಸಾಮಾಜಿಕ ಮಾನದಂಡಗಳ ಪರಿಚಯವಾಗುತ್ತದೆ. ಇದರಿಂದ ಆತ್ಮಗೌರವದ ಮೂಲಕ ಸ್ವ ಅಭಿವ್ಯಕ್ತಿಯ ಪರಿಕಲ್ಪನೆಯೂ ದೊರುತ್ತದೆ. ಪೋಷಕರು ಮಕ್ಕಳ ಅಭಿಪ್ರಾಯ, ಅನಿಸಿಕೆಗಳಿಗೆ ಮಹತ್ವ ನೀಡುವ ಮೂಲಕ ಅವರಿಗೆ ಮನ್ನಣೆ ನೀಡುತ್ತಿರುತ್ತಾರೆ.

ಎಲ್ಲವನ್ನೂ ಒಟ್ಟಾಗಿರಿಸಿದರೆ ಸಮಕಾಲೀನ ಸಾಕ್ಷ್ಯಗಳು ಆತ್ಮಗೌರವವು ಒಟ್ಟು ಕುಟುಂಬದಿಂದ ರೂಪಿತವಾಗುವ ಭಾವನೆಯಾಗಿದ್ದು ಇದು ಭವಿಷ್ಯವನ್ನು ರೂಪಿಸುವ, ಮಕ್ಕಳನ್ನು ಮತ್ತು ಅವರ ಪರಿಸರವನ್ನು ನಿಯಂತ್ರಸುತ್ತಿದೆ. (ಚಿರ್ಕೋವ್, ರಯಾನ್ 2001, ಹಾರ್ಟರ್ 2006ಎ) ಈ ನಿಯಂತ್ರಣದ ಭಾವನೆಯು ಚೌಕಟ್ಟು ಇರದಂತಹದೇನಲ್ಲ. ಕೂಪರ್ ಸ್ಮಿತ್ ಅವರು ನೀಡಿದ ಅಂಕಿ-ಅಂಶಗಳನ್ನು ಗಮನಿಸಿದರೆ ಗುಣಾತ್ಮಕ ಸ್ವಂತಿಕೆಯ ಕಲ್ಪನೆಯುಳ್ಳ ಮಕ್ಕಳು ನಿಮ್ಮ ಚೌಕಟ್ಟನ್ನು ಅರ್ಥ ಮಾಡಿ ಕೊಂಡಿರುತ್ತಾರೆ. ಆದರೆ ಈ ಚೌಕಟ್ಟು ಅವರ ಬೆಚ್ಚಗಿನ ಭಾವವನ್ನು ಕರಗಿಸುವುದಿಲ್ಲ.

ಬದಲಿಗೆ ಇದು ಸಾಕಷ್ಟು ಮಟ್ಟಿಗಿನ ಭರವಸೆ ಮತ್ತು ಸ್ವಾತಂತ್ರ್ಯದ ಭಾವನೆಯನ್ನು ತಂದು ಕೊಡುತ್ತದೆ.

ಪಾಲನೆಯ ಮಾದರಿಗಳು ಮತ್ತು ಮಕ್ಕಳ ಆತ್ಮಗೌರವದ ನಡುವಿನ ಸಂಬಂಧದ ಕುರಿತು ಅನೇಕ ದಶಕಗಳ ಕಾಲ ನಡೆದಿರುವ ಸಮೀಕ್ಷೆಗಳು ಒಂದು ಸ್ಪಷ್ಟ ಚಿತ್ರಣವನ್ನು ನೀಡುವಲ್ಲಿ ಯಶಸ್ವಿಯಾಗಿವೆ. ಆದರೆ ಈ ಹೆಚ್ಚಿನ ಸಮೀಕ್ಷೆಗಳು ಯೂರೋಪಿಯನ್ ಅಮೆರಿಕನ್ ಕುಟುಂಬಗಳ ಮೇಲೆ ನಡೆದಿದೆ ಎನ್ನುವುದನ್ನೂ ಗಮನಿಸ ಬೇಕು. ಇತ್ತೀಚಿನ ಸಮೀಕ್ಷೆಗಳು ಬೇರೆ ಸಂಸ್ಕೃತಿಗಳಲ್ಲಿ ಪೋಷಕರು ತಮ್ಮ ಮಕ್ಕಳ ಬೆಳವಣಿಗೆಯಲ್ಲಿ ಆತ್ಮ ಗೌರವದ ಪಾತ್ರದ ಕುರಿತು ಹೆಚ್ಚಿನ ಮಹತ್ವವನ್ನು ನೀಡುವುದಿಲ್ಲ ಎನ್ನುವುದನ್ನು ಗುರುತಿಸುವೆ. ಎರಡು ವಿಭಿನ್ನವಾದ ಆದರೆ ಬೆಳೆಯುತ್ತಿರುವ ಸಾಂಸ್ಕೃತಿಕ ಸಮುದಾಯಗಳನ್ನು ಹೋಲಿಸಿ ಆಂಡ್ರ್ಯೂ ಗೆಸ್ಟ್ ನೀಡಿರುವ ಉದಾಹರಣೆ ಕುತೂಹಲಕರವಾಗಿದೆ. (2007). ಒಂದು ಚಿಕಾಗೋದಲ್ಲಿನ ಹೌಸಿಂಗ್ ಪ್ರಾಜೆಕ್ಟ್ ಮತ್ತು ಇನ್ನೊಂದು ರಿಪಬ್ಲಿಕ್ ಆಫ್ ಅಂಗೋಲದ ನಿರಾಶ್ರಿತರ ಶಿಬಿರ. ಪಟ್ಟಿ 13.3ರಲ್ಲಿ ಸೂಚಿಸಿರುವಂತೆ ಚಿಕಾಗೋ ಸಮುದಾಯದಲ್ಲಿ ಆತ್ಮ ಗೌರವವನ್ನು ಬಾಲ್ಯವಸ್ಥೆಯ ಮಧ್ಯ ವಯಸ್ಸಿನ ಬಹಳ ಮುಖ್ಯ ಅಭಿವೃದ್ಧಿಯ ಸೂಚ್ಯಾಂಕ ಎಂದು ಗುರುತಿಸಿದರೆ ಅಂಗೋಲದ ಸಮುದಾಯದಲ್ಲಿ ಅದಕ್ಕೆ ಮಹತ್ವ ದೊರಕದೆ ಎಂಟನೇ ಸ್ಥಾನದಲ್ಲಿ ಅದು ನಿಲ್ಲುತ್ತದೆ.

ಸಹಜವಾಗಿ, ಆತ್ಮ ಗೌರವಕ್ಕೆ ಮಹತ್ವ ನೀಡದ ಸಮುದಾಯಗಳು ತಮ್ಮ ಪಾಲನೆಯ ಸ್ವರೂಪದಲ್ಲಿ ಅದಕ್ಕೆ ಒತ್ತನ್ನು ನೀಡಿರುವುದಿಲ್ಲ. ಪಿಗ್ಗಿ ಮಿಲ್ಲರ್ ಮತ್ತು ಸಹೋದ್ಯೋಗಿಗಳು (2002) ಯೂರೋಪಿಯನ್ ಅಮೆರಿಕನ್ ಮತ್ತು ತೈವಾನೀಸ್ ತಾಯಂದಿರ ಮಕ್ಕಳ ಪಾಲನೆ ಮತ್ತು ಅಭಿವೃದ್ಧಿಯ ಕುರಿತು ಸಂಶೋಧನೆಯನ್ನು ನಡೆಸಿದರು. ತೈವಾನ್ ತಾಯಂದಿರು ಅಪರೂಪಕ್ಕೆ 'ಆತ್ಮ ಗೌರವ– ಹೃದಯ ಸಂಪನ್ನತೆ' (ಆತ್ಮ ಗೌರವಕ್ಕೆ ಹತ್ತಿರವಾದ ಚೈನೀಸ್ ಪರಿಕಲ್ಪನೆ) ಕುರಿತು ಗಮನ ನೀಡುತ್ತಿದ್ದರು. ಹಾಗೆ ಮಾಡುವುದು ಮಾನಸಿಕ ಗಾಯಗಳನ್ನು ಮಾಡ ಬಹುದು ಎಂದು ಅವರು ಆತಂಕ ಪಡುತ್ತಿದ್ದರು. ಅದರಂತೆ ವಿಭಿನ್ನ ಸಂಸ್ಕೃತಿಗಳ ತೌಲನಿಕ ಅಧ್ಯಯನವು ಪಾಲನಾ ಪದ್ಧತಿ ಮತ್ತು ಮಕ್ಕಳ ಆತ್ಮ ಗೌರವ ಎರಡೂ ಯೂರೋಪಿಯನ್ ಅಮೆರಿಕನ್ ಕುಟುಂಬಗಳಲ್ಲಿ ಗಟ್ಟಿಯಾಗಿರುತ್ತದೆ ಎಂಬುದನ್ನು ಗುರುತಿಸಿದೆ ಅದರಂತೆ ಮೆಕ್ಸಿಕಲ್ ಅಮೆರಿಕಾ ಕುಟುಂಬಗಳಲ್ಲಿ(ರೂಯಿಜ್, ರೂಸ ಮತ್ತು ಗೋಂಜಲಸ್ 2002) ಇದು ದುರ್ಬಲವಾಗಿರುತ್ತದೆ. ಅಂದರೆ ಮೆಕ್ಸಿಕನ್ ಅಮೆರಿಕಾ ಕುಟುಂಬಗಳಲ್ಲಿ ಮಕ್ಕಳ ಆತ್ಮ ಗೌರವದ ಬೆಳೆಯುವುದರಲ್ಲಿ ಮಕ್ಕಳ ಪಾಲನೆಯ ಪಾತ್ರ ಕಡಿಮೆ ಇರುತ್ತದೆ.

6ರಿಂದ 12 ವರ್ಷ ಮಕ್ಕಳ ಕ್ಷೇಮಾಭಿವೃದ್ಧಿ ಗುರಿಗಳು ಹಿರಿಯರ ಆಯ್ಕೆಯಂತೆ (ಹೆಚ್ಚಿನ ಮಹತ್ವದಿಂದ ಕಡಿಮೆ ಮಹತ್ವದ ಅಂಶಗಳ ಕಡೆಗೆ)

ಚಿಕಾಗೋ, ಅಮೆರಿಕಾ ಸಂಯುಕ್ತ ಸಂಸ್ಥಾನ

1. ಆತ್ಮಗೌರವವನ್ನು ಬೆಳೆಸುವುದು (ಸ್ವ–ಪ್ರೀತಿ)
2. ಪಾಲಕರು ಮತ್ತು ಹಿರಿಯರ ಜೊತೆಗೆ ಉತ್ತಮ ಸಂಬಂಧವನ್ನು ಬೆಳೆಸಿ ಕೊಳ್ಳುವುದು
3. ಮೂಲಭೂತ ಓದು, ಬರವಣಿಗೆ ಮತ್ತು ಗಣಿತದ ಕೌಶಲ್ಯಗಳನ್ನು ಬೆಳೆಸುವುದು
4. ಪೌಷ್ಟಿಕತೆಯ ಕುರಿತು ಅರಿವನ್ನು ಮೂಡಿಸುವುದು ಮತ್ತು ಮಾನಸಿಕ ಸ್ವ ಸಂರಕ್ಷಣೆ
5. ಮೌಲ್ಯ ಮತ್ತು ನೈತಿಕತೆಯನ್ನು ಬೆಳೆಸುವುದು
6. ಬೇರೆ ಮಕ್ಕಳೊಂದಿಗೆ ಬೆರೆಯುವುದನ್ನು ಕಲಿಸುವುದು
7. ಯೋಚಿಸುವುದು ಮತ್ತು ಸೃಜನಶೀಲವಾಗುವುದನ್ನು ಕಲಿಸುವುದು
8. ವೈಯಕ್ತಿಕವಾಗಿ ಸ್ವತಂತ್ರ್ಯವಾಗಿರುವುದನ್ನು ಕಲಿಸುವುದು
9. ಜೊತೆಯಾಗಿ ಕಾರ್ಯ ನಿರ್ವಹಿಸುವುದನ್ನು ಕಲಿಸುವುದು (ಗುಂಪಿನಲ್ಲಿ ಕೆಲಸ ಮಾಡುವುದನ್ನು ಕಲಿಸುವುದು)
10. ಆಟವಾಡುವ ದೈಹಿಕ ಕೌಶಲ್ಯಗಳನ್ನು ಕಲಿಯುವುದು

ರಿಪಬ್ಲಿಕ್ ಆಫ್ ಅಂಗೋಲ

ಸಾಂಸ್ಕೃತಿಕ ತೌಲನಿಕ ಅಧ್ಯಯನದ ಮೂಲಕ ಸಂಶೋಧಕರು ಆತ್ಮಗೌರವವು ಮಕ್ಕಳ ಸ್ವಂತಿಕೆಯ ಬೆಳವಣಿಗೆಯನ್ನು ನಿರ್ಧರಿಸುವ ಸಾರ್ವತ್ರಿಕ ಅಂಶವಲ್ಲ ಆದರೆ ಕೆಲವು ನಿರ್ದಿಷ್ಟ ಸಾಂಸ್ಕೃತಿಕ ಸಂದರ್ಭಗಳಲ್ಲಿ ಪಾಲನಾ ಪದ್ಧತಿಯೊಂದಿಗೆ ಸಾಂಸ್ಕೃತಿಕವಾದ ಸಂಬಂಧವನ್ನು ಹೊಂದಿರುತ್ತದೆ ಎನ್ನುವುದನ್ನು ಗುರುತಿಸಿದ್ದಾರೆ.

ಅನ್ವಯಿಸು: ಸಂಪರ್ಕ ಕಲ್ಪಿಸು

: ಚರ್ಚಿಸು.

- ಬದಲಾಗುವ ಸ್ವಂತಿಕೆಯ ಹೇಗೆ ಮಧ್ಯ ಬಾಲ್ಯಾವಸ್ಥೆಯ ಮಕ್ಕಳ ಸಂಜ್ಞಾನಾತ್ಮಕ ಬೆಳವಣಿಗೆಯ ಮೇಲೆ ಪರಿಣಾಮವನ್ನು ಬೀರುತ್ತದೆ

- ಹೇಗೆ ಆತ್ಮ ಗೌರವವು ಸ್ವ ನಿಯಂತ್ರಣದ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ ಎನ್ನುವುದನ್ನು ಒಂಭತ್ತನೇ ಅಧ್ಯಾಯದಲ್ಲಿ ಗುರುತಿಸಲಾಗಿದೆ. (ನೋಡಿ ಪುಟ 320–329

ನೈತಿಕ ಬೆಳವಣಿಗೆ

ಬಾಲ್ಯದ ಮಧ್ಯಾವಸ್ಥೆಯಲ್ಲಿ ಸಮಾಜದ ನಿಯಮಗಳು ಮತ್ತು ಮಾನದಂಡಗಳ ಕುರಿತು ಮಗುವಿನಲ್ಲಿ ಉಂಟಾಗುವ ಅರಿವು ಸಾಮಾಜಿಕ ಅಭಿವೃದ್ಧಿಯಲ್ಲಿ ಆದಂತೆ ಮಕ್ಕಳಲ್ಲಿ ನೈತಿಕ ಬೆಳವಣಿಗೆಯಲ್ಲಿ ಬದಲಾವಣೆಗಳು ಉಂಟಾಗಲು ಕಾರಣವಾಗುತ್ತದೆ. ನಾವೀಗಾಗಲೇ ಅಧ್ಯಾಯ ಒಂಭತ್ತರಲ್ಲಿ ಗಮನಿಸಿರುವಂತೆ ಮಕ್ಕಳ ವಿವೇಚನೆ ಮತ್ತು ವರ್ತನೆ ಬಾಹ್ಯ ಪರಿಣಾಮಗಳನ್ನು ಅವಲಂಭಿಸಿದ್ದರೆ ಶಿಕ್ಷೆ ಅಂತರಿಕವಾಗಿರುತ್ತದೆ ವ್ಯಕ್ತಿಗತ ತಪ್ಪು ಸರಿಗಳ ಮೂಲಕ ನಿರ್ಧರಿತವಾಗುತ್ತದೆ. ಫ್ರಾಯ್ಡ್‌ರ ಮಾನಸಿಕ ಸಿದ್ಧಾಂತದಂತೆ (ಅಧ್ಯಾಯ 9, ಪುಟ 318 ಗಮನಿಸಿ) ಈ ಪರಿವರ್ತನೆಯು ಮಹದಹಂನ (**ಸೂಪರ್ ಇಗೋದ**) ಬೆಳವಣಿಗೆಯನ್ನು ಅವಲಂಭಿಸಿರುತ್ತದೆ. ನೆನಪಿಡಿ ವ್ಯಕ್ತಿತ್ವದ ಈ ಭಾಗವು ವ್ಯಕ್ತಿಯ ನಡವಳಿಕೆಯು ನೈತಿಕವಾಗಿ ಸರಿಯಾಗಿದೆಯೆ ಎನ್ನುವ ಸಂಗತಿಯನ್ನು ಅವಲಂಭಿಸಿರುತ್ತದೆ. ಇದು ವ್ಯಕ್ತಿಯ ಅಂತರ್ಗತವಾದ ವಿವೇಕ. ಮೊದಲಯನಾಗಿ ಪೋಷಕರು ರೂಪಿಸಿರುವಂತಹದು ಎರಡನೆಯದಾಗಿ ಸಮಾಜವು ರೂಪಿಸುವಂತಹದು. ಒಮ್ಮೆ ಈ ಮಹದಹಂ (**ಸೂಪರ್ ಇಗೋ**) ರೂಪುಗೊಂಡ ನಂತರ ಮಗುವು ಸರಿ ತಪ್ಪುಗಳನ್ನು ಗುರುತಿಸಲು ನೈತಿಕ ತೀರ್ಮಾನಗಳನ್ನು ತೆಗೆದು ಕೊಳ್ಳಲು ಶಕ್ತವಾಗುತ್ತದೆ. ಈಗ ಭೀತಿಯಿಂದಲೂ ಪ್ರತಿಫಲದ ಅಪೇಕ್ಷೆಯಿಂದಲೋ ನಿರ್ಧಾರಗಳನ್ನು ತೆಗೆದು ಕೊಳ್ಳುವುದಿಲ್ಲ.

ಬಾಹ್ಯದಿಂದ ಅಂತರಿಕ ನಿಯಂತ್ರಣದತ್ತ ಬದಲಾವಣೆ ಉಂಟಾಗುವುದು ಸಂಜ್ಞಾನಾತ್ಮಕ ಬೆಳವಣಿಗೆಯಾಗಿದೆ. ಪಿಗಟ್ ಗುರುತಿಸಿದ ಈ ಅಂಶವನ್ನು ಮುಂದಿನ ಸಂಶೋಧಕರೆಲ್ಲರೂ ಅನುಮೋದಿಸಿದ್ದಾರೆ. ಅವರ ಹೆಚ್ಚಿನ ಸಂಶೋಧನೆಯು ಮಕ್ಕಳ ಯಾವುದು ತಪ್ಪು ಯಾವುದು ಸರಿ ಎನ್ನುವುದನ್ನು ಗುರುತಿಸುವ ಮಕ್ಕಳ ವಿವೇಚನೆಯ ಕುರಿತು ಕೇಂದ್ರೀಕರಣಗೊಂಡಿದೆ. ಮಕ್ಕಳು ನೈತಿಕವಾಗಿ ತಪ್ಪು ಅಥವಾ ಸರಿ ಮತ್ತು ನೈತಿಕ ವಿವೇಕ ಮತ್ತು ಸಂಬಂಧದ ಕುರಿತ ಚರ್ಚೆ ಇಲ್ಲಿ ಮಹತ್ವವನ್ನು ಪಡೆದು ಕೊಂಡಿದೆ.

ಪಿಗೆಟ್ ಅವರ ನೈತಿಕ ಬೆಳವಣಿಗೆಯ ಕುರಿತ ಸಿದ್ಧಾಂತ

ಅಧ್ಯಾಯ 9ರಲ್ಲಿ ನಾವು ಪಿಗೆಟ್ ಅವರ ನೈತಿಕ ಬೆಳವಣಿಗೆಯ ಕುರಿತ ಸಿದ್ಧಾಂತವನ್ನು ಗಮನಿಸಿದ್ದೇವೆ. ಅಲ್ಲಿ ವೈವಿಧ್ಯಮಯ ನೈತಿಕತೆ (hetcronomous morality) ಎಂದರೆ

ಸರಿ ತಪ್ಪುಗಳು ಪರಿಸ್ಥಿತಿಗೆ ಅನುಗುಣವಾಗಿ ನಿರ್ಧರಿತವಾಗುವುದರಿಂದ ಹಿಡಿದು. ಸ್ವಾಯತ್ತ ನೈತಿಕತೆ (autonomous morality) ಎಂದರೆ ಸರಿ ತಪ್ಪುಗಳು ವ್ಯಕ್ತಿಯ ಅಂತರಿಕ ಲೆಕ್ಕಾಚಾರ ಮತ್ತು ಉದ್ದೇಶಗಳಿಂದ ನಿರ್ಧರಿತವಾಗುವುದು. (ಪುಟ 319 ಗಮನಿಸಿ). ಪಿಗೆಟ್ ತನ್ನ ಸಮಕಾಲೀನ ಅಭಿವೃದ್ಧಿ ಚಿಂತಕರಂತೆ ಎದುರಿಸಿದ ಮುಖ್ಯ ಪ್ರಶ್ನೆ ಎಂದರೆ ವೈವಿಧ್ಯಮಯ ನೈತಿಕತೆಯಿಂದ ಸ್ವಾಯತ್ತ ನೈತಿಕತೆಗೆ ಪಲ್ಲಟಗೊಳ್ಳಲು ಕಾರಣವಾದ ಸಂಗತಿಗಳು ಯಾವುವು. ಹೇಗೆ ಮಕ್ಕಳು ಇದು ಸರಿ ಇದು ತಪ್ಪು ಎಂದು ನಿರ್ಧರಿಸುವಷ್ಟು ಪರಿಣತಿಯನ್ನು ಪಡೆದು ಕೊಳ್ಳುತ್ತಾರೆ. ಪಿಗೆಟ್ ಇದಕ್ಕೆ ನೀಡುವ ಉತ್ತರ ಎಂದರೆ ನೈತಿಕತೆಯ ಪಲ್ಲಟವು ಉಂಟಾಗಲು ಕಾರಣವೆಂದರೆ ಆತ್ಮೀಯ ಚಟುವಟಿಕೆಗಳು ಅದರಲ್ಲಿಯೂ ಮುಖ್ಯವಾಗಿ ಆಟಗಳು.

4 ಮತ್ತು 5 ವರ್ಷದ ಮಕ್ಕಳಂತೆಯೇ ಮಧ್ಯ ಬಾಲ್ಯವಸ್ಥೆಯನ್ನು ತಲಪಿದ ಮಕ್ಕಳು ಫ್ಯಾಂಟಸಿ ಆಟಗಳಲ್ಲಿ ತಮ್ಮನ್ನು ತೊಡಗಿಸಿ ಕೊಳ್ಳುತ್ತಾರೆ. ಪ್ರತಿ ಮಗುವೂ ಕಾಲ್ಪನಿಕ ಲೋಕದಲ್ಲಿ ವಿಹರಿಸುತ್ತಾರೆ. ಕಳ್ಳರನ್ನು ಅಟ್ಟಿಸಿ ಕೊಂಡು ಹೋಗುವ ಪೋಲೀಸರು. ಹಡಗು ಒಡೆದು ನಿರಾಶ್ರಿತವಾದ ಕುಟುಂಬ ಮರದ ಮೇಲೆ ಆಶ್ರಯವನ್ನು ಪಡೆಯುವುದು. ಮನೆ ಬಿಟ್ಟು ಓಡಿ ಹೋದ ಮಗು ಪಾಳು ಬಿದ್ದ ಕೋಟೆಯಲ್ಲಿ ಆಶ್ರಯವನ್ನು ಪಡೆಯುವುದು. ಹೀಗೆ ಅವರ ಕಲ್ಪನಾ ಲೋಕ ವಿಸ್ತಾರವಾಗುತ್ತಾ ಹೋಗುತ್ತದೆ. (ಸಿಂಗರ್, 2006) ಆದರೆ 7 ಅಥವಾ 8ನೇ ವಯಸ್ಸಿನಲ್ಲಿ ಮಕ್ಕಳು ನಿಯಮಗಳಿಂದ ಕೂಡಿದ ಆಟಗಳಲ್ಲಿ ಕೂಡ ತಮ್ಮನ್ನು ತೊಡಗಿಸಿ ಕೊಳ್ಳುತ್ತಾರೆ. ನಾವು 9ನೇ ಅಧ್ಯಾಯದಲ್ಲಿ ಗಮನಿಸಿದಂತೆ ಫ್ಯಾಂಟಸಿ ಆಟ ಕೂಡ ನಿಯಮಗಳನ್ನು ಅನುಸರಿಸ ಬಹುದು. ಈ ನಿಯಮಗಳು ಬದಲಾಗಲೂ ಬಹುದು. ಆದರೆ ಈ ಬದಲಾವಣೆ ಸಾಮಾನ್ಯವಾಗಿ ಅತಾರ್ಕಿಕವಾಗಿಯೂ ಇರುತ್ತದೆ. ಆದರೆ ಮಧ್ಯ ಬಾಲ್ಯವಸ್ಥೆಯಲ್ಲಿ ರೂಪಿತವಾಗುವ ನಿಯಮಗಳಿಗೆ ನಿಖರತೆಯ ಲಕ್ಷಣಗಳು ಬರುತ್ತವೆ. ಅನುಸರಣೆಯ ಸ್ವರೂಪ ಬರುತ್ತದೆ. ಅದನ್ನು ಮುರಿಯುವುದು ಮೋಸ ಎಂದು ಕೂಡ ಎನ್ನಿಸಿಕೊಳ್ಳುತ್ತದೆ.

ಪಿಗಟ್ ಕೆಲವು ಪ್ರಸಿದ್ಧ ಮತ್ತು ಪರಿಣಾಮಕಾರಿಯಾದ ಅಧ್ಯಯನಗಳನ್ನು ಮಕ್ಕಳು ಆಟವನ್ನು ನಿಯಮಗಳ ಸಹಿತ ಅರ್ಥ ಮಾಡಿ ಕೊಳ್ಳುವುದನ್ನು ಕುರಿತಾಗಿ ನಡೆಸಿದ್ದಾರೆ. ಮಾರ್ಬಲ್‌ನೊಂದಿಗೆ ಆಡುವ ಆಟದಲ್ಲಿ ಚಿಕ್ಕ ಮಕ್ಕಳೂ ಕೂಡ (6ರಿಂದ 8ವರ್ಷದೊಳಗಿನ ಮಕ್ಕಳು) ಆಟದ ನಿಯಮಗಳಿಗೆ 'ನಿಗೂಢ ಗೌರವವನ್ನು' ನೀಡುವುದನ್ನು ಅವರು ಗಮನಿಸಿದ್ದಾರೆ. ಅವರು ಆಟದ ನಿಯಮಗಳು 'ಶಾಶ್ವತ ಮತ್ತು ಎಂದೂ ಬದಲಾಗದಂತಹದು' ಎಂದು ಭಾವಿಸಿರುತ್ತಾರೆ. ಏಕೆಂದರೆ ಅವು ಅಷ್ಟು ಹೊತ್ತಿಗಾಗಲೇ ಹೆತ್ತವರು, ತಾತ ಅಜ್ಜಿಯರು ಕೊನೆಗೆ ದೇವರು (ಪಿಗಟ್, 1965/1995, ಪುಟ 206–207) (ದೇವರ ಕುರಿತ ಮಕ್ಕಳ ಚಿಂತನೆಗಳು). ಹೀಗೆ ರೂಪುಗೊಂಡ

ನಿಯಮಗಳು ವೈವಿಧ್ಯಮಯ ನೈತಿಕತೆಗೆ ದಾರಿ ಮಾಡಿ ಕೊಡುತ್ತದೆ. ಇದಕ್ಕೆ ವಿರುದ್ದವಾಗಿ ಸ್ವಾಯತ್ತ ನೈತಿಕತೆಯಲ್ಲಿ ಹಿರಿಯ ಮಗು (10ರಿಂದ 12ನೇ ವಯಸ್ಸಿನದು) ನಿಯಮಗಳು ನಿಗೂಢವೂ ಅಲ್ಲ ಬದಲಾದಂತಹವು ಅಲ್ಲ ಆದರೆ ಅವು ವಿವೇಕದಿಂದ ರೂಪುಗೊಂಡವು. ಆಟಗಾರರ ಒಪ್ಪಿಗೆಯ ಮೇಲೆ ರೂಪುಗೊಂಡಂತವು. ಆಟಗಾರರ ಸಮ್ಮತಿಯೊಂದಿಗೆ ಬದಲಾಗ ಬಲ್ಲಂತವು ಎಂಬುದನ್ನು ಅರಿತು ಕೊಂಡಿರುತ್ತದೆ.

ಪಿಜೆಟ್(1932/1965) ಆಟವು ಸಮಾಜದ ಮಾದರಿಯಾಗಿದೆ ಎಂದು ಗುರುತಿಸುತ್ತಾರೆ. ನಿಯಮಗಳನ್ನು ಹೊಂದಿದ ಆಟ ಸಾಮಾಜಿಕ ಸಂಸ್ಥೆಗಳ ಕೆಲವು ಗುಣ ಲಕ್ಷಣಗಳನ್ನು ಹೊಂದಿರುತ್ತದೆ ಎನ್ನುತ್ತಾರೆ. ಮೊದಲಿಗೆ ನಿಯಮಗಳನ್ನು ಅವಲಂಭಿಸಿದ ಆಟದ ಲಕ್ಷಣಗಳು ಸ್ಥಿರವಾಗಿದ್ದು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ವರ್ಗಾಯಿಸಲ್ಪಡುತ್ತವೆ. ಅದರಂತೆ ಸಾಮಾಜಿಕ ಸಂಸ್ಥೆಗಳೂ ನಿರ್ದಿಷ್ಟ ಸಾಮಾಜಿಕ ಸನ್ನಿವೇಶದಲ್ಲಿ ವ್ಯಕ್ತಿಯು ಹೇಗೆ ವರ್ತಿಸ ಬೇಕು ಎನ್ನುವ ನಿಯಮಗಳನ್ನು ಕಲಿಸುತ್ತವೆ. ಅದು ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆ ಕೂಡ ಆಗುತ್ತದೆ. ಎರಡನೆಯದಾಗಿ ಆಟಕ್ಕೆ ನಿಯಮಗಳು ಆಟಗಾರರು ಅದನ್ನು ಒಪ್ಪಿಕೊಂಡರೆ ಮಾತ್ರ ಇರುತ್ತವೆ. ಅದರಂತೆ ಅನುಯಾಯಿಗಳು ಇಲ್ಲದಿದ್ದರೆ ಯಾವ ಧರ್ಮಗಳೂ ಕೂಡ ಇರುತ್ತಿರಲಿಲ್ಲ. ಮಕ್ಕಳು ಆಡುವುದನ್ನು ನಿಲ್ಲಿಸಿದರೆ ಯಾವ ಆಟಗಳೂ ಕೂಡ ಇರುವುದಿಲ್ಲ. ಸಾಮಾಜಿಕ ಸಂಸ್ಥೆಗಳ ಭಾಗವಾಗಲು ವ್ಯಕ್ತಿಗಳು ತಮ್ಮ ತಕ್ಷಣದ ಆಸೆಗಳನ್ನು ನಿಯಂತ್ರಿಸಿ ಕೊಂಡು ಸಮಾಜವು ಒಪ್ಪಿದ ವ್ಯವಸ್ಥೆಯಂತೆ ವರ್ತಿಸ ಬೇಕಾಗುತ್ತದೆ. ಅದು ನಂಬಿಕೆ, ಸಂಪ್ರದಾಯ, ಧರ್ಮ ಕೊನೆಗೆ ಮಾರ್ಬಲ್ ಆಟ ಕೂಡ ಆಗಿರ ಬಹುದು. ಪಿಗೆಟ್ (1932/1965) ದೃಷ್ಟಿಕೋನದಂತೆ ಇದು ಆಟದಂತೆ ಕೊಡು ಕೊಳ್ಳುವಿಕೆಯ ಸಂಧಾನ, ಅಸಮಾಧಾನಗಳ ನೆಲೆಗಳು, ನಿಯಮಗಳನ್ನು ರೂಪಿಸುವುದು ಮತ್ತು ಅನುಸರಿಸುವುದು, ವಾಗ್ದಾನಗಳನ್ನು ನೀಡುವುದು ಮತ್ತು ಮುರಿಯುವುದು ಎಲ್ಲವನ್ನೂ ಒಳಗೊಂಡ ಪ್ರಕ್ರಿಯೆ. ಆಟದ ಮೂಲಕವೇ ಮಕ್ಕಳು ಸಮಾಜದ ನಿಯಮಗಳನ್ನು ಅರಿತು ಕೊಳ್ಳುತ್ತಾರೆ. ಇತರರೊಂದಿಗೆ ಹೊಂದಾಣಿಕೆಯಿಂದ ಬದುಕಲು ತಿಳಿಯುತ್ತಾರೆ. ಈ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯದಿಂದ ಆತ್ಮೀಯ ವಲಯಗಳು ಸ್ವಯಂ ಪರಿಪೂರ್ಣವಾಗಿರುತ್ತವೆ. ಅದರ ಸದಸ್ಯರು ಸ್ವಾಯತ್ತ ಮೌಲ್ಯ ಚಿಂತನೆಗಳನ್ನು ಹೊಂದಿರುತ್ತಾರೆ.

ಕೋಲಬರ್ಗ್ ಅವರ ನೈತಿಕ ಬೆಳವಣಿಗೆಯ ಸಿದ್ದಾಂತ

ಪಿಗೆಟ್ ಅವರ ನೈತಿಕ ಬೆಳವಣಿಗೆಯ ಸಿದ್ಧಾಂತವನ್ನು ಮುಂದುವರೆಸುವ ಪ್ರಭಾವಿ ಪ್ರಯತ್ನವನ್ನು ಲಾರೆನ್ಸ್ ಕೋಲಬರ್ಗ್ ಮಾಡಿದ್ದಾರೆ. (ಟುರಾಯಿಲ್, 2002) ಪಿಗೆಟ್ ನೈತಿಕ ಪ್ರಜ್ಞೆಯ ಬೆಳವಣಿಗೆಯಲ್ಲಿ ಎರಡು ಹಂತಗಳನ್ನು ಬಾಲ್ಯದಿಂದ ಗುರುತಿಸುತ್ತಾರೆ.

ಒಂದು ಒಂದು ವೈವಿಧ್ಯಮಯವಾದರೆ ಇನ್ನೊಂದು ಅನುಕ್ರಮಣಿಕೆಯದು. ಕೋಲ್‌ಬರ್ಗ್ ಅದನ್ನು ವಿಸ್ತರಿಸಿ ಬಾಲ್ಯ, ಹರಯಕ್ಕೆ ಬರುವ, ಹದಿ ಹರಯ ಈ ಪಯಣದಲ್ಲಿ ಆರು ಘಟ್ಟಗಳನ್ನು ಗುರುತಿಸುತ್ತಾರೆ. ಈ ಆರು ಘಟ್ಟಗಳನ್ನು ಮೂರು ನೈತಿಕ ಪ್ರಜ್ಞೆಯ ವಲಯವಾಗಿ ವಿಂಗಡಿಸಲಾಗಿದೆ. ಸಾಂಪ್ರದಾಯಕತೆಗಿಂತ ಮುಂಚಿನ ಕಾಲಘಟ್ಟ, ಸಾಂಪ್ರದಾಯಿಕತೆಯ ಕಾಲಘಟ್ಟ, ಸಾಂಪ್ರದಾಯಿಕತೆಯ ನಂತರದ ಕಾಲಘಟ್ಟ. (ಕೂಲ್‌ಬೇ ಮತ್ತು ಕೋಲ್ಸ್‌ಬರ್ಗ್, 1987, ಕೋಲ್ಸ್‌ಬರ್ಗ್, 1969, 1976, 1984). ಈ ಹಂತಗಳು ಯಾವುದು ಸರಿ ಮತ್ತು ಸರಿಯಾದದ್ದನ್ನೇ ಮಾಡುವ ಮನೋಭಾವಗಳನ್ನು ಅವಲಂಭಿಸಿದೆ. ಸ್ವಕೇಂದ್ರೀಕೃತ ಚಿಂತನೆಗಳು ಕುಸಿಯುತ್ತಾ ಸಾಮಾಜಿಕವಾಗಿ ಭಾಗಿಯಾಗುವ ಚಿಂತನೆ ರೂಪುಗೊಳ್ಳುತ್ತಾ ಹೋಗುವುದನ್ನು ಇದು ಅವಲಂಭಿಸಿದೆ. ಪಟ್ಟಿ 13.4 ಆರು ಘಟ್ಟಗಳನ್ನೂ ಸೂಚಿಸುತ್ತಿದ್ದ. ಮೊದಲ ಮೂರರ ಸ್ವರೂಪವನ್ನು ವಿವರವಾಗಿ ನೀಡಲಾಗಿದೆ. ಅದನ್ನು ಈ ಕೆಳಗೆ ನಾವು ಚರ್ಚಿಸಿದ್ದೇವೆ. (ಅಧ್ಯಾಯ 14ರಲ್ಲಿ ನಾವು ಹದಿಹರಯದಲ್ಲಿ ನೈತಿಕ ಪ್ರಜ್ಞೆ ವಿಕಸನವಾಗುವದರ ಕುರಿತು ಚರ್ಚಿಸುತ್ತೇವೆ. ಅಲ್ಲಿ ಕೋಲ್‌ಬರ್ಗ್ ಅವರ ಸಿದ್ಧಾಂತವನ್ನು ಸಂಪೂರ್ಣವಾಗಿ ಪರಾಮರ್ಶಿಸಲಾಗುತ್ತದೆ.)

ಬಾಕ್ಸ್ ಮ್ಯಾಟರ್

ದೇವರ ಕುರಿತು ಮಕ್ಕಳ ಚಿಂತನೆಗಳು

ಅರೆನ್, ವಯಸ್ಸು 9

ಸ್ವರ್ಗದಲ್ಲಿ ಒಂದು ದಿನ ದೇವರು ತನ್ನ ಲಘು ನಿದ್ದೆಯಿಂದ ಎಚ್ಚೆತ್ತನು. ಅದು ಅವನ ಜನ್ಮದಿನವಾಗಿತ್ತು. ಆದರೆ ಯಾರಿಗೂ ಅದು ಅವನ ಜನ್ಮದಿನ ಎಂಬುದು ತಿಳಿದಿರಲಿಲ್ಲ. ಆದರೆ ಒಬ್ಬ ಅಪ್ಸರೆ.. ಈ ಅಪ್ಸರೆ ಉಳಿದ ಅಪ್ಸರೆಯರ ಜೊತೆಗೂಡಿ ವಿಶಿಷ್ಟವಾದ ಪ್ರದಕ್ಷಿಣೆಯನ್ನು ಹಾಕಿದಳು. ಹೂಮಳೆಯಿಂದ ಅಚ್ಚರಿಗೊಂಡ ದೇವನು ಗಮನಿಸಿದಾಗ ಅವರೆಲ್ಲರೂ ಅವನ ಬರ್ತ್ ಡೇ ಪಾರ್ಟಿಯನ್ನು ಅಯೋಜಿಸಿದ್ದು ಗೊತ್ತಾಯಿತು. (ಹೆಲ್ಲರ್ 1980, ಉಲ್ಲೇಖ ಬಾರ್ನೆಟ್ 2001)

ಅದರಂತೆ ವಯಸ್ಕ

ದೇವರು ಸರ್ವಶಕ್ತ, ಸರ್ವವ್ಯಾಪಕ, ಆದರೆ ಮನುಷ್ಯನು ತನ್ನ ಪ್ರದೇಶಕ್ಕೆ ಸೀಮಿತನಾಗಿರುತ್ತಾನೆ. ಮನುಷ್ಯನು ದೇವರು ಮಾಡ ಬಲ್ಲ ಕೆಲಸಗಳನ್ನು ಮಾಡಲಾರ. ದೇವರು ಯಾವುದೇ ಮಿತಿಗಳಿಲ್ಲದ, ಅಯಾಮಗಳಿಲ್ಲದ ವಿಶ್ವರೂಪಿ (ಉಲ್ಲಾಹ್, 1984 ಉಲ್ಲೇಖ 2001)

ಈ ಹೋಲಿಕೆಯ ಮಕ್ಕಳ ದೇವರ ಕಲ್ಪನೆಯು ಪ್ರಾಥಮಿಕ ಹಂತದ್ದು, ಅವರು ದೇವರಿಗೂ ಮನುಷ್ಯರಂತೆ ಹುಟ್ಟು ಹಬ್ಬಗಳಿರುತ್ತವೆ. ಅವನೂ ಮನುಷ್ಯರಂತೆ ನಿದ್ದೆ ಮಾಡಿ ಏಳುತ್ತಾನೆ. ತುಂತುರು ಮಳೆಯನ್ನು ಆನಂದಿಸುತ್ತಾನೆ ಎಂದು ಊಹಿಸುತ್ತಾರೆ. ಅವರಿಗೆ ಅಮೂರ್ತ ಪರಿಕಲ್ಪನೆಗಳು ಗೊತ್ತಿಲ್ಲ. ದೈಹಿಕ ಮತ್ತು ಪ್ರಾಕೃತಿಕ ಸತ್ಯಗಳನ್ನು ಕಂಡು ಅದನ್ನು ವಿಸ್ತರಿಸಿ ಕೊಳ್ಳುತ್ತಾರೆ.

ಇದು ಫ್ರಾಯ್ಡ್ ಮತ್ತು ಪಿಗೆಟ್ ಇಬ್ಬರೂ ತಳೆದಿರುವ ನಿಲುವಾಗಿದೆ. ನಂತರ ಮಕ್ಕಳು ದೇವರ ಕುರಿತು ಪೋಷಕರು ಹೊಂದಿದ ಅಭಿಪ್ರಾಯವನ್ನೇ ಹೊಂದುತ್ತಾರೆ ಎನ್ನುತ್ತಾರೆ ಫ್ರಾಯ್ಡ್ ಉದಾಹರಣೆಗೆ ದೇವರ ಪರಿಕಲ್ಪನೆಯೇ ನಮ್ಮ ಅಗತ್ಯಗಳನ್ನು ಅವಲಂಬಿಸಿದ್ದು ತಂದೆಯಂತೆ ನಮ್ಮನ್ನು ಪೊರೆಯುವ ಶಕ್ತಿ ಎಂದು ನಂಬಲಾಗುತ್ತದೆ. ಪಿಗೆಟ್ ಇನ್ನೂ ವಿಸ್ತರಿಸುತ್ತಾ ಮಕ್ಕಳ ಸಂಜ್ಞಾನಾತ್ಮಕ ಬೆಳವಣಿಗೆಯನ್ನು ಅವಲಂಭಿಸಿ ದೇವರ ಪರಿಕಲ್ಪನೆ ಕೂಡ ಬದಲಾಗುತ್ತಾ ಹೋಗುತ್ತದೆ ಎಂದು ಗುರುತಿಸಿದ್ದಾರೆ. ಮೊದಲಿಗೆ ಮಕ್ಕಳು ದೇವರು ಮತ್ತು ಪೋಷಕರು ಇಬ್ಬರನ್ನೂ ರಕ್ಷಕ ಶಕ್ತಿಗಳನ್ನಾಗಿ ಗುರುತಿಸುತ್ತಾರೆ. ಪೋಷಕರ ಮಿತಿಗಳು ಅರ್ಥವಾಗುತ್ತಾ, ಅವರೂ ತಪ್ಪನ್ನು ಮಾಡುತ್ತಾರೆ ಎನ್ನುವುದು ಅರ್ಥವಾಗುತ್ತಾ ಹೋದಂತೆ ದೇವರನ್ನು ಸರ್ವಶಕ್ತ ಎಂದು ಪರಿಭಾವಿಸಿ ಕೊಳ್ಳುತ್ತಾರೆ. ಹದಿ ಹರಯವನ್ನು ತಲುಪುವವರೆಗೂ ದೇವರು 'ಸರ್ವಜ್ಞ' ಮತ್ತು 'ಸರ್ವಶಕ್ತ' ಎನ್ನುವ ಕಡೆಗಿನ ಚಿಂತನೆ ಬೆಳೆಯುತ್ತಾ ಹೋಗುತ್ತದೆ.

ಮಕ್ಕಳ ದೇವರ ಕಲ್ಪನೆಯನ್ನು ಕುರಿತು ಅನೇಕ ಮಾದರಿಗಳನ್ನು ಬಳಸಿ ಅಧ್ಯಯನಗಳು ನಡೆದಿವೆ. ಮಕ್ಕಳನ್ನು ದೇವರನ್ನು ವರ್ಣಿಸುವಂತೆ, ದೇವರ ಚಿತ್ರವನ್ನು ಬರೆಯುವಂತೆ, ದೇವರ ಮನೆಯನ್ನು ವರ್ಣಿಸುವಂತೆ ಕೇಳಲಾಯಿತು. ಎಲ್ಲಾ ಅಧ್ಯಯನಗಳ ಫಲಿತಾಂಶಗಳನ್ನು ಒಟ್ಟಾಗಿರಿಸಿ ನೋಡಿದಾಗ ಬಾಲ್ಯದಿಂದ ಹದಿ ಹರಯದವರೆಗೆ ಈ ಪರಿಕಲ್ಪನೆಗಳು ಅಮೂಲಾಗ್ರ ಬದಲಾವಣೆಯನ್ನು ಪಡೆದು ಕೊಂಡಿದ್ದ ತಿಳಿದು ಬಂದಿತು. ಉದಾಹರಣೆಗೆ ಡಿಮಿನರಿಸ್ ನೋವೋಮಿಕಸ್ (Dimilris Pnevmatikos) (2002) ಐದನೇ ತರಗತಿಯವರಿಗಿನ ಲಕ್ಸಂಬರ್ಗ್‌ನ ಕ್ಯಾಥೋಲಿಕ್ ಮತ್ತು ಗ್ರೀಕ್ ಸಾಂಪ್ರದಾಯಕ ಕುಟುಂಬದಿಂದ ಬಂದ ಮಕ್ಕಳನ್ನು ದೇವರು ವಾಸಿಸುವ ಮನೆಯ ಚಿತ್ರವನ್ನು ಬರೆಯುವಂತೆ ಕೇಳಿದರು. ಅವರು ಗಮನಿಸಿದಂತೆ ಒಂದು ಮತ್ತು ಎರಡನೇ ತರಗತಿಯ ಮಕ್ಕಳು ತಮ್ಮ ಮನೆಗಳ ಚಿತ್ರಗಳನ್ನೇ ಇಲ್ಲವೆ ಸಮೀಪದಲ್ಲಿರುವ ಚರ್ಚ್‌ನ ಚಿತ್ರಗಳನ್ನೇ ಬರೆದರು. ಮೂರನೇ ತರಗತಿಯ ಮಕ್ಕಳು ಮೋಡದ ನಡುವೆ ಮನೆಯ ಚಿತ್ರವನ್ನು ಬರೆದು ಸ್ವರ್ಗದ ವಾತಾವರಣವನ್ನು ಮೂಡಿಸಲು ಪ್ರಯತ್ನಿಸಿದರು. ಇನ್ನೂ ಹೆಚ್ಚು ಬೆಳೆಯುತ್ತಾ ಮಕ್ಕಳ ಚಿತ್ರಗಳಲ್ಲಿ ಮಾನವರು ವಾಸಿಸುವಂತಹ ಮಾದರಿಯ ಮನೆಗಳ ಚಿತ್ರಗಳು ದೂರವಾಗಿ ಆನೆಯನ್ನು ಹೋಲುವ ಸಂಕೇತಗಳು, ಸ್ವರ್ಗವನ್ನು ಹೋಲುವ

ಚಿತ್ರಣಗಳು, ಅಪ್ಸರೆಯರು, ಮಿನುಗುವ ತಾರೆಯರು ಎಲ್ಲವೂ ಕಂಡು ಬಂದವು. ನಾಲ್ಕನೇ ತರಗತಿಯ ನಂತರ ತಾರ್ಕಿಕ ಚಿಂತನೆಗಳು ಬೆಳೆಯಲು ಆರಂಭಿಸಿದವು. ದೇವರೊಂದಿಗೆ ದೇವತೆಯರೂ ಬಂದರು. ಪ್ರೀತಿ, ಶಾಂತಿ ಮತ್ತಿತರ ಭಾವಗಳನ್ನು ಸೂಚಿಸುವ ಪ್ರಯತ್ನಗಳು ಕಂಡು ಬಂದವು. ವಾಸ ಎಂಬುದರ ಅರ್ಥ ಕೂಡ ವಿಸ್ತರಿಸುತ್ತಾ ಹೋಯಿತು.

ಇನ್ನೊಂದು ಕಡೆ ಕೆಲವು ಅಭಿವೃದ್ಧಿ ಚಿಂತಕರು ಕಿರಿಯ ಮತ್ತು ಹಿರಿಯ ಮಕ್ಕಳ ದೇವರ ಕುರಿತ ಕಲ್ಪನೆಗಳು ಹಿಂದೆ ಭಾವಿಸಿದಂತೆ ನಾಟಕೀಯವಾಗಿ ಬೆಳೆಯುವುದಿಲ್ಲ ಎಂದು ಗುರುತಿಸಿದ್ದಾರೆ. ಕೆಲವು ಅಧ್ಯಯನಗಳಂತೆ ಅದು ಅವಶ್ಯಕತೆಯನ್ನು ಅವಲಂಭಿಸಿರುತ್ತದೆ. ಇನ್ನು ಕೆಲವು ಅಧ್ಯಯನಗಳಂತೆ ಅದು ದೇವರನ್ನು ಮಾನವೀಯ ರೂಪದಲ್ಲಿ ನೋಡುವ ಪ್ರಯೋಗವೂ ಆಗಿರುತ್ತದೆ. ಅಮೆರಿಕಾ ಸಂಯುಕ್ತ ಸಂಸ್ಥಾನ, ಭಾರತದಂತಹ ದೇಶಗಳಲ್ಲಿ ದೇವರು ಕುರಿತ ಕಥೆಗಳನ್ನು ಕೇಳುತ್ತಲೇ ಮಕ್ಕಳು ಬೆಳೆಯುತ್ತಾರೆ. ಅವರ ಕಲ್ಪನೆಗಳೂ ಕೂಡ ಇಂತಹ ಕಥೆಗಳನ್ನು ಅನುಸರಿಸಿಯೇ ಬೆಳೆಯುತ್ತವೆ. ಇದನ್ನು ಅನುಸರಿಸಿ ಮಕ್ಕಳೇ ಕಥೆಗಳನ್ನು ಸೃಷ್ಟಿಸುವುದೂ ಇದೆ. ಬಾಲಕನೊಬ್ಬನು ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿರುತ್ತಾನೆ. ಅವನ ಕಾಲುಗಳು ಬಂಡೆಗಳ ನಡುವೆ ಸಿಲುಕುತ್ತದೆ. ಅವನು ವಿಷ್ಣು, ಶಿವ, ಬ್ರಹ್ಮ ಅಥವಾ ಕೃಷ್ಣ ಹೀಗೆ ಅವನು ನಂಬುವ ದೇವರನ್ನು ಕುರಿತು ಪ್ರಾರ್ಥಿಸುತ್ತಾನೆ. ದೇವರು ಅವನ ಪ್ರಾರ್ಥನೆಗೆ ಸ್ಪಂದಿಸಿ ರಕ್ಷಿಸುತ್ತಾನೆ. ಹೀಗೆ ಕೇಳಿದ ಕಥೆಗಳು ಮತ್ತು ತಮ್ಮ ಕಲ್ಪನೆಯನ್ನು ಸೇರಿಸಿ ಮಕ್ಕಳು ದೇವರ ಕುರಿತ ತಮ್ಮ ಕಲ್ಪನೆಗಳನ್ನು ಬೆಳೆಸಿ ಕೊಳ್ಳುತ್ತಾರೆ. (ಬಾರ್ನೆಟ್, 2001)

ಈ ಕಥೆಯನ್ನು ವಿಶ್ಲೇಷಿಸುವಾಗ ಮಕ್ಕಳು ದೇವರು ಎಲ್ಲರ ಪ್ರಾರ್ಥನೆಗಳನ್ನೂ ಇಷ್ಟೇ ಒತ್ತಡದಲ್ಲಿದ್ದರೂ ಆಲಿಸುತ್ತಾನೆ ಎಂಬ ಭಾವವು ಕಂಡು ಬರುತ್ತದೆ. ಹದಿ ಹರಯದವರು ಇಂತಹ ಕಥೆಗಳನ್ನು ವಿಶ್ಲೇಷಿಸುವಾಗ ದೇವರು ಬೇರೆಯವರ ಪ್ರಾರ್ಥನೆಯನ್ನು ಆಲಿಸುತ್ತಿದ್ದಾಗ ಬಾಲಕನ ಗತಿ ಎನ್ನುವಂತಹ ಭಾವ ಕೂಡ ಬಂದಿದ್ದು ಇದೆ. ಕುತೂಹಲಕರ ಸಂಗತಿ ಎಂದರೆ ದೇವರ ಬದಲು ದೇವದೂತ ಎಂಬ ಕಲ್ಪನೆ ತಂದಾಗ ಸಮಸ್ಯೆಗಳು ಪರಿಹಾರವಾಗುತ್ತವೆ ಎನ್ನುವ ಉತ್ಸಾಹ ಹದಿಹರಯದವರಲ್ಲಿ ಕಂಡು ಬಂದಿತು. ಮಕ್ಕಳು ದೇವರನ್ನು ಮನುಷ್ಯನ ವಿಸ್ತಾರವಾಗಿಯೇ ನೋಡುತ್ತಿದ್ದರೆ ಹದಿಹರಯದವರು ಸರ್ವಶಕ್ತನನ್ನಾಗಿ ನೋಡುತ್ತಿದ್ದರು. ವಿವೇಕದ ಹಿನ್ನೆಲೆಯಲ್ಲಿ ಗುರುತಿಸಲು ಪ್ರಯತ್ನಿಸುವುದರಿಂದ ದೇವರ ಕುರಿತ ಅವರ ಪರಿಕಲ್ಪನೆಗಳು ಸಂಕೀರ್ಣವಾಗಿದ್ದವು.

ಕೆಲವು ಮಕ್ಕಳೂ ಕೂಡ ಹದಿ ಹರಯದವರಂತೆ ಮಾನುಷ್ಯನ ಬುದ್ಧಿಶಕ್ತಿ ಮತ್ತು ಅದನ್ನು ಮೀರಿದ ಶಕ್ತಿಯ ವ್ಯತ್ಯಾಸವನ್ನು ಗುರುತಿಸ ಬಲ್ಲರು. ಇದು ಕೂಡ ನಾಟಕೀಯ ವ್ಯತ್ಯಾಸಕ್ಕೆ ಕಾರಣವಾಗುತ್ತದೆ. 'ತಪ್ಪು ನಂಬಿಕೆಯ ಪ್ರಯೋಗ' (ಅಧ್ಯಾಯ 8, ಪುಟ 290)ವನ್ನು ಬಳಸಿ ಜೆಸ್ಟಿನ್ ಬಾರ್ನೆಟ್ ಮತ್ತು ಅವರ ಸಹೋದ್ಯೋಗಿಗಳು 3–6 ವರ್ಷದ ಮಕ್ಕಳು ಪಟಾಕಿ ಪೆಟ್ಟಿಗೆಯಲ್ಲಿ ಕಲ್ಲನ್ನು ಮಕ್ಕಳಿಗೆ ತಿಳಿಯುವಂತೆ ಕಲ್ಲನ್ನು ತುಂಬಿ ಪ್ಯಾಕ್ ಮಾಡಿ ಇಡಲಾಗಿತ್ತು. ಅದನ್ನು ಅರಿಯದ ಪಕ್ಕದ ಕೋಣೆಯಲ್ಲಿರುವ ಆ ಮಕ್ಕಳ ತಾಯಿ ಈ ಪ್ಯಾಕ್ ನೋಡಿ ಏನೆಂದು ಭಾವಿಸುತ್ತಾರೆ ಎಂಬ ಪ್ರಶ್ನೆಗೆ ಮೂರು ವರ್ಷದ ಮಕ್ಕಳ ಉತ್ತರ 'ಕಲ್ಲು'ಎಂದೇ ಆಗಿತ್ತು. ಏಕೆಂದರೆ ತಮ್ಮ ತಾಯಿ ಎಂದಿಗೂ ಮೋಸ ಹೋಗಲಾರಳು ಎನ್ನುವುದು ಅವರ ನಂಬಿಕೆಯಾಗಿತ್ತು. ಅದೇ ಐದು ವರ್ಷದ ಮಗುವನ್ನು ಕೇಳಿದಾಗ 'ಪಟಾಕಿ'ಎಂದೇ ಉತ್ತರಿಸಿತು. ಆ ವೇಳೆಗಾಗಲೇ ತಮ್ಮ ತಾಯಿಗೂ ಕೆಲವು ಮಿತಿಗಳಿವೆ ಎಂಬುದು ಅವರ ಅರಿವಿಗೆ ಬಂದಿತ್ತು. ಅದೇ ರೀತಿಯಲ್ಲಿ ದೇವರು ಏನು ಭಾವಿಸ ಬಹುದು ಎಂದು ಕೇಳಿದಾಗ ಐದು ವರ್ಷಕ್ಕಿಂತ ಚಿಕ್ಕ ಮಕ್ಕಳು 'ಕಲ್ಲು'ಎಂದೇ ಹೇಳಿದರು. ಆದರೆ ಅದಕ್ಕಿಂತ ದೊಡ್ಡವರು ತಾಯಿಗೆ ಮಿತಿಗಳಿದ್ದರೂ ದೇವರಿಗೆ ಇಲ್ಲ ಎಂಬುದನ್ನು ವಿವರಿಸಿದರು.

ಇದರಿಂದ ಮಕ್ಕಳು ಮತ್ತು ದೊಡ್ಡವರು ದೇವರನ್ನು ಪರಿಭಾವಿಸುವ ರೀತಿಯಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲದಿರುವುದು ಖಚಿತವಾಗುತ್ತದೆ. ಒಂದು ಕಾಲದಲ್ಲಿ ದೊಡ್ಡವರು ದೇವರನ್ನು ಅಮೂರ್ತವಾಗಿ ಭಾವಿಸುವುದು ಸಾಧ್ಯ ಆದರೆ ಮಕ್ಕಳು ಮಾನವ ಸ್ವರೂಪದಲ್ಲಿಯೇ ನೋಡುತ್ತಾರೆ ಎಂದು ನಂಬಲಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಮಕ್ಕಳಿಗೆ ಕೂಡ ಅಮೂರ್ತತೆಯ ಕಲ್ಪನೆ ಇರುವುದು ಖಚಿತವಾಗುತ್ತಿದೆ.

(ಇಲ್ಲಿ ಮಕ್ಕಳು ಬಿಡಿಸಿದ ಚಿತ್ರಗಳು ಬರಬೇಕು)

ಬಾಕ್ಸ್ ಮ್ಯಾಟರ್ ಮುಗಿಯುತ್ತದೆ.

ಕೋಲ್‌ಬರ್ಗ್ ಅವರ ನೈತಿಕ ಬೆಳವಣಿಗೆಯ ಸಿದ್ಧಾಂತದಂತೆ ಸಾಂಪ್ರದಾಯಿಕ ಕಲಿಕೆಯ ಮುಂಚಿನ ಹಂತದಲ್ಲಿ ಮಕ್ಕಳು ಸರಿ ತಪ್ಪನ್ನು ಸಂದರ್ಭ ನೋಡಿ ತಿಳಿಯುತ್ತಾರೆಯೇ ಹೊರತು ನಿಯಮಗಳನ್ನು ನೋಡಿ ಅಲ್ಲ. ಇದು ಬೆಳವಣಿಗೆಯ ಒಂದನೇ ಮತ್ತು ಎರಡನೇ ಹಂತವನ್ನು ಒಳಗೊಂಡಿರುತ್ತದೆ.

ಮೊದಲನೆಯ ಹಂತ: ವೈವಿಧ್ಯಮಯ ನೈತಿಕತೆ: ಇದು ಪೂರ್ವ ಪ್ರಾಥಮಿಕ ಶಾಲಾ ಹಂತದಿಂದ ಬಾಲ್ಯಾವಸ್ಥೆಯ ಮಧ್ಯದ ಹಂತದವರೆಗಿನ ಅವಧಿಯನ್ನು ಒಳಗೊಂಡಿರುತ್ತದೆ. ಈ ಹಂತದ ಮಕ್ಕಳ ಕುರಿತ ಸಾಮಾಜಿಕ ಗ್ರಹಿಕೆಯೆಂದರೆ ಸ್ವ

ಕೇಂದ್ರೀತವಾಗಿದ್ದು ತಪ್ಪು ಸರಿಗಳ ನಿರ್ಧಾರವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಇನ್ನೊಬ್ಬರ ಅಗತ್ಯಗಳ ಅರಿವಿಲ್ಲದಂತೆ ತೆಗೆದು ಕೊಳ್ಳುತ್ತಾರೆ. ಅವರ ತಪ್ಪು ಸರಿಗಳ ಗ್ರಹಿಕೆ ಕೂಡ ತಕ್ಷಣದಲ್ಲಿ ಇತರರಿಂದ ಅವರು ಬಯಸುವ ಫಲಿತಾಂಶವನ್ನು ಅವಲಂಭಿಸಿರುತ್ತದೆ. ಮೊದಲ ಹಂತದಲ್ಲಿ ಮಕ್ಕಳು ಕದಿಯ ಬಾರದು ಜೈಲಿಗೆ ಹಾಕುತ್ತಾರೆ ಎನ್ನುವಂತಹ ಸರಳ ಸಮೀಕರಣಗಳ ಮೂಲಕ ನೈತಿಕತೆಯ ಅರಿವನ್ನು ಹೊಂದುತ್ತಿರುತ್ತಾರೆ.

ಎರಡನೇ ಹಂತ: ಕಾರಣೀಭೂತ ನೆಲೆಯ ನೈತಿಕತೆ: (instrumental morality)7

ಅಥವಾ 8ನೇ ವಯಸ್ಸನ್ನು ತಲುಪಿದ ನಂತರ ಮಕ್ಕಳ ಸಾಮಾಜಿಕ ಗ್ರಹಿಕೆಗಳು ಬದಲಾಗುತ್ತವೆ. ಈಗ ಮಕ್ಕಳು ಬೇರೆ ಬೇರೆಯವರು ಬೇರೆ ಬೇರೆ ಉದ್ದೇಶ ಮತ್ತು ಆಸಕ್ತಿಯನ್ನು ಹೊಂದಿರುತ್ತಾರೆ ಎನ್ನುವುದನ್ನು ಅರ್ಥ ಮಾಡಿಕೊಳ್ಳ ಬಲ್ಲವರಾಗಿರುತ್ತಾರೆ. ಇದು ತಮ್ಮ ಆಸಕ್ತಿಯೊಂದಿಗೆ ಸಂಘರ್ಷಕ್ಕೆ ಕಾರಣವಾಗ ಬಲ್ಲದು ಎನ್ನುವುದನ್ನೂ ಅರ್ಥ ಮಾಡಿ ಕೊಳ್ಳುತ್ತಾರೆ. ಹೀಗಾಗಿ ನೈತಿಕತೆ ಇಲ್ಲಿ ವ್ಯಕ್ತಿಗತವಾಗಿರುತ್ತದೆ. ಅಂದರೆ ನಿರ್ದಿಷ್ಟ ಸಂದರ್ಭ ಮತ್ತು ಸನ್ನಿವೇಶಗಳನ್ನು ಅವಲಂಭಿಸಿರುತ್ತದೆ. ಇಂತಹ ಸ್ಪಷ್ಟ ವ್ಯಕ್ತಿಗತ ಸಾಮಾಜಿಕ ಕಾಣ್ಕೆಯನ್ನು ನೈತಿಕತೆಯ ನಿರ್ಧಾರ ಅವಲಂಭಿಸಿರುತ್ತದೆ. ಹೀಗಾಗಿ ಇದು ವೈಯಕ್ತಿಕವಾಗಿರುವುದರ ಜೊತೆಗೆ ಇತರರೂ ಹಾಗೆ ಇರಬೇಕು ಎನ್ನುವ ಅಪೇಕ್ಷೆಯನ್ನು ಅವಲಂಭಿಸಿರುತ್ತದೆ. ಅದರಂತೆ ಪಾರದರ್ಶಕತೆಯು ಪರಸ್ಪರ ಹಂಚಿಕೆಯ ವ್ಯವಸ್ಥೆಯಲ್ಲಿ ಮುಖ್ಯವಾಗುತ್ತದೆ. ಕೊಟ್ಟಷ್ಟೇ ಪಡೆಯುವ ಉದ್ದೇಶವನ್ನು ಇಲ್ಲಿ ನೋಡ ಬಹುದು. ಕೋಲ್ಸ್‌ಬರ್ಗ್ ನೈತಿಕ ವಿವೇಕವನ್ನು ಈ ವಯಸ್ಸಿನಲ್ಲಿ ಕಾರಣೀಭೂತ ನೆಲೆಯ ನೈತಿಕತೆ ಎನ್ನಲು ಕಾರಣವೆಂದರೆ ಇಲ್ಲಿ ನೈತಿಕತೆಯು ಕಾರಣಸಹಿತವಾದ ಸ್ವಂತ ಹಿತಾಸಕ್ತಿಯ ಮೇರೆಗೆ ಬಳಕೆಯಾಗುತ್ತದೆ. ಮಕ್ಕಳು ಈ ಹಂತದಲ್ಲಿ ಹಿಂಜ್ ದ್ವಂದ್ವವನ್ನು ಎದುರಿಸುತ್ತಾರೆ. ಎಂದರೆ ಹಿಂಜ್ ಕ್ಯಾನ್ಸರ್ ಔಷಧಿಯನ್ನು ತನಗೆ ಮುಂದಾದರೂ ಕ್ಯಾನ್ಸರ್ ಬರಬಹುದು ಎಂಬ ಉದ್ದೇಶದಿಂದ ಕದಿಯುತ್ತಾನೆ. ಮತ್ತು ತನಗಾಗಿ ಯಾರಾದರೂ ಕದಿಯ ಬೇಕು ಎಂದು ಬಯಸುತ್ತಾನೆ.

ಎರಡನೇ ಹಂತವು ಹಿರಿಯರ ಮೇಲುಸ್ತುವಾರಿ ಇಲ್ಲದೆ ನಿರ್ಧಾರವನ್ನು ತೆಗೆದು ಕೊಳ್ಳ ಬಲ್ಲ ಶಾಲಾ ಮಕ್ಕಳ ಹಂತವನ್ನು ಸೂಚಿಸುತ್ತದೆ. ಮಕ್ಕಳು ಸರಿ ತಪ್ಪನ್ನು ನಿರ್ಣಯಿಸಲು ಈಗ ಬೇರೆಯವರನ್ನು ಅವಲಂಭಿಸುವುದಿಲ್ಲ. ಬದಲಾಗಿ ಅವರ ವರ್ತನೆಯು ಗುಂಪಿನ ಇತರ ಸದಸ್ಯರ ವರ್ತನೆಯನ್ನು ಅವಲಂಭಿಸಿರುತ್ತದೆ. ಕೆಲವೊಮ್ಮೆ ಫಲಿತಾಂಶವು ನಿರ್ಣಯಿತವಾಗಿರುತ್ತದೆ. (ನಾನು ನಿನ್ನ ಮಾದರಿಗೆ ನೆರವಾಗುತ್ತೇನೆ ನೀನು ನನಗೆ ನೆರವಾಗು) ಬೇರೆಯ ಸಂದರ್ಭದಲ್ಲಿ ಹಾಗಾಗದೆ ಅದು ಭಿನ್ನವಾಗಿರ ಬಹುದು.(ನಿನಗೆ ಒಂದು ಶಿಕ್ಷೆಯಾಗಿದ್ದನ್ನು ನಿನ್ನ ತಾಯಿಗೆ ಹೇಳುವುದಿಲ್ಲ. ನೀನು ನನಗೆ ಗಣಿತದಲ್ಲಿ

ಕಡಿಮೆ ಅಂಕಗಳು ಬಂದಿದ್ದನ್ನು ಹೇಳ ಬೇಡ) ಇಂತಹ ಯಾವುದೇ ಸಮೀಕರಣವಿರಲಿ ಇಂತಹ ಯೋಚನೆಯು ಮಕ್ಕಳು ಪರಸ್ಪರ ಸಹಕಾರಿಯಾಗಿರುವಂತೆ ಮಾಡುತ್ತದೆ.

ಸಾಂಪ್ರದಾಯಿಕ ನೆಲೆಯಲ್ಲಿ ನೈತಿಕ ವಿಚಾರಗಳಲ್ಲಿ ಮಕ್ಕಳು ಹೊರಗಿನ ಪ್ರೇರಣೆಯಿಂದ ಕ್ರಮೇಣ ಸಮಾಜವು ರೂಪಿಸಿದ ಪದ್ಧತಿ ಮತ್ತು ನಿಯಮಗಳ ಕಡೆಗೆ ಚಲಿಸುತ್ತಾರೆ. ಇಂತಹ ಮೊದಲ ಸ್ತರವು 3ನೇ ಹಂತದಲ್ಲಿ ಉಂಟಾಗುತ್ತದೆ. ಮಕ್ಕಳು ಈ ಹಂತವನ್ನು 10ರಿಂದ 11ನೇ ವಯಸ್ಸಿನಲ್ಲಿ ತಲಪುತ್ತಾರೆ. ಈ ಘಟ್ಟದಲ್ಲಿ ಮಕ್ಕಳು ನೈತಿಕ ವಿವೇಚನೆಯನ್ನು ಪಡೆಯುತ್ತಾರೆ. ಈ ಹಂತದಲ್ಲಿಯೇ ನೈತಿಕ ನಿರ್ಣಯಗಳು ಇತರರೊಂದಿಗಿನ ಸಂಬಂಧಗಳ ಸಾಮಾಜಿಕ ಹಿನ್ನೆಲೆಯಲ್ಲಿ ರೂಪಿತವಾಗುತ್ತವೆ. ಮಕ್ಕಳು ಈ ಹಂತದಲ್ಲಿ ವೈಯಕ್ತಿಕ ಹಿತಾಸಕ್ತಿಗಳಿಗಿಂತ ಹೆಚ್ಚಾಗಿ ತಮಗೆ ಹೆಚ್ಚು ಹತ್ತಿರವಾದವರೊಂದಿಗೆ ಭಾವನೆಗಳನ್ನು ಹಂಚಿಕೊಳ್ಳುತ್ತಾರೆ. ಚರ್ಚೆಗಳನ್ನು ಮಾಡುತ್ತಾರೆ. ಕೋಲ್ಸ್ ಬರ್ಗ್ (1984) ಉಲ್ಲೇಖಿಸುವಂತೆ ಒಂದು ಮಗುವು 'ನಾನು ಹಿಂಜ್ ಆಗಿದ್ದರೆ ನನ್ನ ಹೆಂಡತಿಗಾಗಿ ಔಷಧವನ್ನು ಕದಿಯುತ್ತಿದ್ದೆ ಪ್ರೀತಿಗೆ ಬೆಲೆಯನ್ನು ಕಟ್ಟಲು ಆಗುವುದಿಲ್ಲ. ಎಂತಹ ಉಡುಗೊರೆಗಳು ಕೂಡ ಪ್ರೀತಿಗೆ ಸಮನಾಗಲಾರವು' (ಪುಟ 629) ಎಂದು ಹೇಳಿತು. ಮೂರನೇ ಹಂತವು ಬಂಗಾರದ ನಿಯಮಕ್ಕೆ (ನನ್ನನ್ನು ಇತರರು ಹೇಗೆ ನಡೆಸಿಕೊಳ್ಳ ಬೇಕು ಎಂದು ಬಯಸುತ್ತೀನೋ ಹಾಗೆ ಇತರರೊಂದಿಗೆ ನಾನು ನಡೆದು ಕೊಳ್ಳುತ್ತೇನೆ) ಇಂತಹ ಆದರ್ಶವನ್ನು ಎಲ್ಲಾ ಧರ್ಮದಲ್ಲಿಯೂ ನೋಡ ಬಹುದಾಗಿದೆ.

ಕೋಲ್ಸ್‌ಬರ್ಗ್‌ರ ಸಿದ್ಧಾಂತ ಮತ್ತು ಸಂದರ್ಶನದ ಮಾದರಿ ಮಕ್ಕಳ ನೈತಿಕ ಬೆಳವಣಿಗೆಯನ್ನು ಕುರಿತ ಅಧ್ಯಯನಗಳ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದೆ. 14ನೇ ಅಧ್ಯಾಯದಲ್ಲಿ ನೋಡಿರುವಂತೆ ಅವರ ಕೆಲವು ಸಿದ್ಧಾಂತಗಳು ಗಂಭೀರ ವಿಮರ್ಶೆಗೆ ಒಳಗಾಗಿವೆ. ಅದರ ಸೀಮಿತ ವ್ಯಾಪ್ತಿ ಸಂಸ್ಕೃತಿಗಳ ನಡುವಿನ ವ್ಯತ್ಯಾಸವನ್ನು ಗಮನಿಸದಿರುವುದು ನೈತಿಕ ಮೌಲ್ಯ ಮತ್ತು ಚಿಂತನೆಗಳನ್ನು ಸರಿಯಾಗಿ ಪ್ರತಿಪಾದಿಸದಿರುವುದು ಅದರ ಮಿತಿ ಎನ್ನಿಸಿಕೊಂಡಿದೆ. ಅದರ ಹೊರತಾಗಿಯೂ ಬೀರಿರುವ ಪರಿಣಾಮ ದೊಡ್ಡದೇ.

ಕೋಲ್ ಬರ್ಗ್ ಗುರುತಿಸಿದ ನೈತಿಕ ಬೆಳವಣಿಗೆಯ ಆರು ಹಂತಗಳು

ಹಂತಗಳು

ಸಂಪ್ರದಾಯಪೂರ್ವ ಹಂತ

ಹಂತ-1

–ವೈವಿಧ್ಯಮಯ ನೈತಿಕತೆ

ಯಾವುದು ಸರಿ

*ಶಿಕ್ಷೆಯ ಬೆದರಿಕೆಯೊಂದಿಗೆ ರೂಪುಗೊಂಡ ನಿಯಮಗಳ ಪಾಲನೆ

*ತನ್ನ ಕಾರಣಕ್ಕಾಗಿ ವಿಧೇಯತೆ

*ವ್ಯಕ್ತಿಗಳಿಗೆ ಮತ್ತು ಆಸ್ತಿಗೆ ಹಾನಿಯಾಗದಂತೆ ವರ್ತಿಸುವುದು

ಸರಿಯಾದ ವರ್ತನೆಗೆ ಕಾರಣಗಳು

*ಶಿಕ್ಷೆಯನ್ನು ತಪ್ಪಿಸಿ ಕೊಳ್ಳುವುದು

*ಮೇಲಿನವರ ಅಧಿಕಾರದ ಭಯ

ಸಾಮಾಜಿಕ ನೆಲೆಗಟ್ಟು

ಸ್ವಕೇಂದ್ರೀಕೃತ ಚಿಂತನೆ: ಬೇರೆಯವರ ಕುರಿತು ಯೋಚಿಸದಿರುವುದು. ಅವರ ವಿಚಾರಗಳು ತನಗಿಂತ ಭಿನ್ನವಾಗಿರ ಬಹುದು ಎಂಬುದನ್ನು ಗುರುತಿಸದಿರುವುದು. ವರ್ತನೆ ಎಂದರೆ ಬೇರೆಯವರ ದೈಹಿಕ ಕ್ರಿಯೆಗಳೇ ಹೊರತು ಮಾನಸಿಕ ಕ್ರಿಯೆಗಳಲ್ಲ ಎಂಬ ವರ್ತನೆ. ಅಧಿಕಾರದ ರೀತಿಗಳನ್ನೇ ತಾನೂ ಮುಂದುವರೆಸುವ ಪ್ರಯತ್ನ.

ಹಂತ–2

ಕಾರ್ಯ ಕಾರಣ ನೆಲೆಯ ನೈತಿಕತೆ

ಯಾವುದು ಸರಿ

*ತನ್ನ ಸ್ವ ಹಿತಾಸಕ್ತಿಯಿಂದಲೇ ಕಾನೂನನ್ನು ಪಾಲಿಸುವುದು

*ತನ್ನ ಹಿತಾಸಕ್ತಿಯನ್ನು ಮಾತ್ರ ಗಮನಿಸಿ ಇತರರ ವಿಚಾರದಲ್ಲಿ ಅವಗಣನೆಯನ್ನು ತೋರುವುದು

* ಪ್ರಾಮಾಣಿಕತೆ, ಸಮಾನ ಹಂಚಿಕೆ

ಸರಿಯನ್ನು ಮಾಡುವುದಕ್ಕೆ ಕಾರಣಗಳು

*ಬೇರೆಯವರ ಹಿತಾಸಕ್ತಿಯೂ ಇರುವ ಪ್ರಪಂಚದಲ್ಲಿ ತನ್ನ ಹಿತಾಸಕ್ತಿಯನ್ನು ಕಾಪಾಡಿ ಕೊಳ್ಳುವುದು

ಸಾಮಾಜಿಕ ನೆಲೆಗಟ್ಟು

ಸ್ಪಷ್ಟ ವ್ಯಕ್ತಿಗತ ನೆಲೆಗಟ್ಟು: ಎಲ್ಲರೂ ತಮ್ಮ ಹಕ್ಕುಗಳ ಬಗ್ಗೆ ಜಾಗೃತರಾದರೆ ಒಬ್ಬರ ಹಕ್ಕುಗಳೊಡನೆ ಇನ್ನೊಬ್ಬರ ಹಕ್ಕುಗಳು ಸಂಘರ್ಷಕ್ಕೆ ಒಳಗಾಗುತ್ತವೆ. ಹೀಗಾಗಿ ಇದು ಸಾಪೇಕ್ಷವಾದದ್ದು.

ಸಾಂಪ್ರದಾಯಿಕ

ಮೂರನೇ ಹಂತ

ಒಳ್ಳೆಯವನಾಗುವ ಪ್ರಯತ್ನ

ಯಾವುದು ಸರಿ

*ಹತ್ತಿರದವರ ನಿರೀಕ್ಷೆಗಳನ್ನು ಗಮನಿಸಿ ಅದಕ್ಕೆ ಅನುಗುಣವಾಗಿ ಬದುಕುವುದು

*ಒಳ್ಳೆಯ ಉದ್ದೇಶಗಳನ್ನು ಇಟ್ಟು ಕೊಂಡು ಬೇರೆಯವರ ಕುರಿತೂ ಕಾಳಜಿಯನ್ನು ತೋರಿಸುವುದು

ಸರಿಯನ್ನು ಮಾಡುವುದಕ್ಕೆ ಕಾರಣಗಳು

*ತನ್ನ ಮಟ್ಟಿಗೆ ಮತ್ತು ಇತರರ ಮಟ್ಟಿಗೆ ಒಳ್ಳೆಯವನಾಗುವುದು

*ಇತರರ ಕುರಿತು ಕಾಳಜಿಯನ್ನು ಹೊಂದುವುದು

*ಸ್ವರ್ಣ ನಿಯಮದ ಕುರಿತು ನಂಬಿಕೆಯನ್ನು ಇಡುವುದು

*ನಿಯಮಗಳನ್ನು ಗೌರವಿಸುವುದು ಉತ್ತಮ ಸ್ವಭಾವವನ್ನು ಬೆಂಬಲಿಸುವುದು

ಸಾಮಾಜಿಕ ನೆಲೆಗಟ್ಟು

*ಇತರರೊಂದಿಗೆ ಉತ್ತಮ ಸಂಬಂಧವನ್ನು ಹೊಂದುವ ಪ್ರಯತ್ನ. ಭಾವನೆಗಳನ್ನು ಹಂಚಿ ಕೊಳ್ಳುವುದು ಕಷ್ಟ ಸುಖಗಳಲ್ಲಿ ಭಾಗಿಯಾವುದು ಮೊದಲಾದವುಗಳ ಕುರಿತು ಅರಿವು

*ಸ್ವರ್ಣ ನಿಯಮಕ್ಕೆ ಅನುಗುಣವಾಗಿ ಹೊಂದಿ ಕೊಳ್ಳುವುದು

ನಾಲ್ಕನೇ ಹಂತ

ಕಾನೂನಿನ ಕುರಿತ ನೈತಿಕತೆ

ಯಾವುದು ಸರಿ

*ಕಾನೂನನ್ನು ಗೌರವಿಸುವುದು

ಸರಿಯನ್ನು ಮಾಡುವುದಕ್ಕೆ ಕಾರಣ

*ಸಂಸ್ಥೆಯು ಉತ್ತಮವಾಗಿ ಮುಂದುವರೆಯಲು ಸಹಕಾರಿಯಾಗುವುದು

ಸಾಮಾಜಿಕ ನೆಲೆಗಟ್ಟು

*ಸಾಮಾಜಿಕ ಗುಂಪಿಗೆ ಅನುಗುಣವಾದ ಪರಿಕಲ್ಪನೆ

ಸಾಂಪ್ರದಾಯಿಕತೆಯ ನಂತರದ ಹಂತ ಅಥವಾ ನಿಯಮ ಬದ್ಧವಾದದ್ದು

ಐದನೇ ಹಂತ

ಸಾಮಾಜಿಕ ಬದ್ಧತೆ

ಯಾವುದು ಸರಿ

*ಪ್ರತಿಯೊಬ್ಬರೂ ತನ್ನದೇ ಆದ ರೀತಿಯ ಮೌಲ್ಯ ಮತ್ತು ಅಭಿಪ್ರಾಯಗಳನ್ನು ಹೊಂದಿದ್ದಾರೆ ಎನ್ನುವ ಅರಿವು

ಸರಿಯನ್ನು ಮಾಡುವುದಕ್ಕೆ ಕಾರಣ

*ಗುಂಪಿನ ಯಶಸ್ಸು ಮತ್ತು ಸಾಮಾಜಿಕ ಅನುಬಂಧದ ಕಾರಣದಿಂದ ನಿಯಮಗಳನ್ನು ಗೌರವಿಸುವ ಅನಿವಾರ್ಯತೆಯನ್ನು ಅರ್ಥ ಮಾಡಿ ಕೊಂಡಿರುವುದು

ಸಾಮಾಜಿಕ ಪರಿಕಲ್ಪನೆ

*ಸಮಾಜ ಪರ ನಿಲುವು ಇತರರ ಮೌಲ್ಯ ಮತ್ತು ಹಕ್ಕುಗಳ ಬಗ್ಗೆ ಅರಿವನ್ನು ಹೊಂದುವ ಜವಾಬ್ದಾರಿ

ಆರನೇ ಹಂತ

ಸಾರ್ವತ್ರಿಕ ಮೌಲ್ಯಗಳ ಅರಿವು

ಯಾವುದು ಸರಿ

*ಯಾವುದು ಸರಿ ಎನ್ನುವುದರ ಕುರಿತು ತನ್ನದೇ ಆದ ಅರಿವನ್ನು ಹೊಂದುವುದು

ಸರಿಯನ್ನು ಮಾಡುವುದಕ್ಕೆ ಕಾರಣ

*ಸಮಾಜದ ಮೌಲ್ಯ ವ್ಯವಸ್ಥೆಯ ಕುರಿತು ಅರಿವನ್ನು ಹೊಂದುವುದು

ಸಾಮಾಜಿಕ ಪರಿಕಲ್ಪನೆ

*ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ನೈತಿಕತೆ ರೂಪುಗೊಂಡಿರುವುದರ ಕುರಿತು ಅರಿವು

ಸಮಾಜ ಪರವಾದ ಮೌಲ್ಯ ವಿವೇಚನೆ

ಸಮಾಜ ಪರವಾದ ಮೌಲ್ಯ ವಿವೇಚನೆ ಎಂದರೆ ತನಗೆ ತೊಂದರೆಯಾದರೂ ಇನ್ನೊಬ್ಬರ ಕಷ್ಟದಲ್ಲಿ ನೆರವಾಗುವುದು. (ಎಸೆನ್‌ಬರ್ಗ್, ಸ್ಪಿನಾರ್ಡ್ ಮತ್ತು ಸಾದ್ವೋಸ್ಕಿ, 2006) ನ್ಯಾನ್ಸಿ ಎಸನ್ಬರ್ಗ್ (1992; ಎಸೆನ್‌ಬರ್ಗ್ ಮತ್ತು ಫೇಬ್ಸ್ 2006; ಎಸೆನ್‌ಬರ್ಗ್, ಎಗ್ಗುಮ್ ಮತ್ತು ಎಡ್ವರ್ಡ್ಸ್, 2010) ಅವರ ಪ್ರಕಾರ ಸಮಾಜಪರ ಚಿಂತನೆಗಳು ಕೋಲ್ಸ್‌ಬರ್ಗ್ ಅವರ ನೈತಿಕ ಬೆಳವಣಿಗೆಯ ಸಿದ್ಧಾಂತದಂತೆ ಹಂತ ಹಂತವಾಗಿ ಬೆಳೆಯುತ್ತದೆ.

ಸಮಾಜ ಪರವಾದ ಮೌಲ್ಯ ವಿವೇಕದ ಕುರಿತ ತನ್ನ ಸಂಶೋಧನೆಯಲ್ಲಿ ಸ್ವಂತ ಹಿತಾಸಕ್ತಿ ಮತ್ತು ಬೇರೆಯವರ ಹಿತಾಸಕ್ತಿಯ ನಡುವೆ ವ್ಯಕ್ತಿಯಲ್ಲಿ ನಡೆಯುವ ಸಂಘರ್ಷವನ್ನು ಅಧ್ಯಯನ ಮಾಡಲು ಕಥೆಯ ಮಾದರಿಯನ್ನು ಬಳಸಿ ಕೊಂಡಿದ್ದಾರೆ. ಉದಾಹರಣೆಗೆ ಅಂತಹ ಒಂದು ಕಥೆ ಹೀಗಿದೆ. ಆಟವಾಡುತ್ತಿರುವ ಬಾಲಕನಿಗೆ ಇನ್ನೊಬ್ಬ ಬಾಲಕನನ್ನು ಗೂಳಿಯು ತಿವಿಯುತ್ತಿರುವುದು ಕಾಣುತ್ತದೆ. ಹತ್ತಿರದಲ್ಲಿ ಯಾವ ದೊಡ್ಡವರೂ ಕೂಡ ಕಾಣಿಸುತ್ತಿಲ್ಲ. ಇಲ್ಲಿನ ಪ್ರಶ್ನೆ ಎಂದರೆ ಈಗ ಬಾಲಕನು ತನ್ನ ಆಟವನ್ನು ಬಿಟ್ಟು ಎದುರಿಸುವ ಶಕ್ತಿ ಇಲ್ಲದಿದ್ದರೂ ಗೂಳಿಯ ದಾಳಿಯಿಂದ ಇನ್ನೊಬ್ಬ ಸ್ನೇಹಿತನನ್ನು ರಕ್ಷಿಸ ಬೇಕೆ? ಇನ್ನೊಂದು ಕಥೆ ಬಾಲಕನೊಬ್ಬನು ಸ್ನೇಹಿತನ ಬರ್ತ್ ಡೇ ಪಾರ್ಟಿಗೆ ಹೊರಟಾಗ ಇನ್ನೊಬ್ಬ ಬಾಲಕನು ಗಾಯಗೊಂಡಿರುವುದನ್ನು ನೋಡುತ್ತಾನೆ. ಬರ್ತ್‌ಡೇ ಪಾರ್ಟಿಗೆ ಹೋಗುವುದನ್ನು ಬಿಟ್ಟು ಆ ಬಾಲಕನಿಗೆ ನೆರವಾಗ ಬೇಕೆ. ಇದಕ್ಕೆ ಐದು ಮತ್ತು ಹತ್ತನೇ ವಯಸ್ಸಿನಲ್ಲಿರುವ ಮಕ್ಕಳ ಉತ್ತರಗಳು ಮಧ್ಯ ಬಾಲ್ಯಾವಸ್ಥೆಯ ಕುರಿತು ರೂಪಿತವಾದ ಚಿಂತನೆಗಳಿಗೆ ಅನುಗುಣವಾಗಿಯೇ ಇದೆ.

ವರ್ಷ ಐದು

ಸಂದರ್ಶಕ: ನಿನಗೆ ಏನನ್ನಿಸುತ್ತದೆ, ಎರಿಕ್(ಕಥೆಯ ಪ್ರಧಾನ ಪಾತ್ರವಾದ ಬಾಲಕ) ಏನು ಮಾಡ ಬೇಕು

ಮಗು: ಪಾರ್ಟಿಗೆ ಹೋಗ ಬೇಕು

ಸಂದರ್ಶಕ: ಏಕಾಗಿ

ಮಗು: ಅವನು ತಡವಾಗಿ ಹೋಗ ಬಾರದು

ಸಂದರ್ಶಕ: ಏಕೆ ಅವನು ತಡ ಮಾಡಬಾರದು

ಮಗು: ತಡ ಮಾಡಿದರೆ ಪಾರ್ಟಿ ಮುಗಿದು ಹೋಗ ಬಹುದು

ವಯಸ್ಸು ಹತ್ತು ವರ್ಷ

ಸಂದರ್ಶಕ: ಎರಿಕ್ ಈಗ ಏನು ಮಾಡ ಬೇಕು?

ಮಗು: ಅವನು ಗಾಯಗೊಂಡ ಬಾಲಕನ ಹೆತ್ತವರನ್ನು ಹುಡುಕಿ ಕರೆ ತರಬೇಕು

ಸಂದರ್ಶಕ: ಏಕೆ ಅವನು ಬರ್ತ್ ಡೇ ಪಾರ್ಟಿಗೆ ಹೋಗುವುದನ್ನು ಬಿಟ್ಟು ಬಾಲಕನ ಹೆತ್ತವರನ್ನು ಕರೆ ತರಬೇಕು

ಮಗು: ತಡ ಮಾಡಿದರೆ ಆ ಬಾಲಕನ ಕಾಲು ಮುರಿದು ಹೋಗಿ ಅನೇಕ ತೊಂದರೆಗಳನ್ನು ಅನುಭವಿಸ ಬೇಕಾಗ ಬಹುದು. ಮುಂದಾಗುವ ಅನಾಹುತವನ್ನು ತಪ್ಪಿಸಲು ಬಾಲಕನ ಹೆತ್ತವರನ್ನು ಆದಷ್ಟು ಬೇಗ ಕರೆ ತರುವುದೇ ಸರಿಯಾದ ದಾರಿ.

(ಎಸಾನ್ ಬರ್ಗ್, 1992, ಪುಟ 29)

ಮಕ್ಕಳ ನೈತಿಕ ಬೆಳವಣಿಗೆಗೆ ಅನೇಕ ಸಂಗತಿಗಳು ಕಾರಣವಾಗ ಬಲ್ಲವು. ಆದರೆ ಸಂಶೋಧನೆಗಳು ಗುರುತಿಸುವಂತೆ ಅದರ ಸ್ವರೂಪವನ್ನು ಈ ಉದಾಹರಣೆಗಳು ಖಚಿತ ಪಡಿಸುತ್ತವೆ. ಚಿಕ್ಕ ಮಕ್ಕಳು ತಮ್ಮ ಸಂತೋಷಕ್ಕೆ ಗಮನ ನೀಡುತ್ತಿರುತ್ತಾರೆ. ಇನ್ನೊಬ್ಬರಿಗೆ ಮಾಡುವ ಸಹಾಯ ಕೂಡ ಅದರಿಂದ ತನಗೆ ಏನು ಲಾಭ ಎಂದು ಯೋಚಿಸುವ ಸೀಮಿತ ನೆಲೆಯನ್ನು ಹೊಂದಿರುತ್ತದೆ. ಆದರೆ ಬೆಳೆಯುತ್ತಾ ಹೋದಂತೆ ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಮನೋಸ್ಥಿತಿ ಸಮಾಜಿಕ ಅಂಶಗಳಿಗೆ ಸ್ಪಂದಿಸುವ ಭಾವನೆ ಬೆಳೆಯುತ್ತಾ ಹೋಗುತ್ತದೆ.

ಇಲ್ಲಿರುವ ಪ್ರಶ್ನೆ ಇಂತಹ ಸಾಮಾಜಿಕ ಕಾಳಜಿಯು ನಿಜ ಜೀವನದ ವೈಯಕ್ತಿಕ ವರ್ತನೆಯಲ್ಲಿ ಹೇಗೆ ಬಿಂಬಿತವಾಗುತ್ತದೆ ಎನ್ನುವುದಾಗಿದೆ. ನ್ಯಾನ್ಸಿ ಐಸನ್‌ಬರ್ಗ್ ಮತ್ತು ಅವರ ಸಹೋದ್ಯೋಗಿಗಳು (2003) ಗುರುತಿಸಿರುವಂತೆ ವಯಸ್ಸಿನೊಂದಿಗೇ ವಿವೇಚನೆಯು ಬೆಳೆಯುತ್ತಾ ಹೋಗುತ್ತದೆ. ಕದಿಯುವ ಪ್ರವೃತ್ತಿಯ ಕುರಿತ ಅಧ್ಯಯನಗಳು

ಗುರುತಿಸಿರುವಂತೆ ಹೆಚ್ಚಿನ ಸಾಮಾಜಿಕ ವಿವೇಕವನ್ನು ಉಳ್ಳ ಮಕ್ಕಳು ಕದಿಯುವ ಇನ್ನೊಬ್ಬರಿಗೆ ಮೋಸ ಮಾಡುವ ಪ್ರವೃತ್ತಿಯನ್ನು ಹೊಂದಿರುವುದಿಲ್ಲ. ಆದರೆ ಕೆಲವೊಮ್ಮೆ ಆಕರ್ಷಣೆ ಮತ್ತು ತುಡಿತಗಳು ದಾರಿ ತಪ್ಪಿಸುವುದಿದೆ. (ಅಲೆನ್‌ಕಾರ್, ಡಿ ಒಲಿವರಾ ಮತ್ತು ಯಾಮಾಮಂಟೋ 2008; ಸೂಬೋಸ್ಕಿ, 1993). ಅದರಂತೆ ವಯಸ್ಸು ಹೆಚ್ಚಾದಂತೆ ನೈತಿಕತೆ ಕೆಲವೊಮ್ಮೆ ಹೆಚ್ಚಾಗದೆ ಕೂಡ ಹೋಗ ಬಹುದು. ಅಂತಹ ಬೌದ್ಧಿಕ ಸಾಮರ್ಥ್ಯವಿದ್ದಾಗಲೂ ಕೂಡ

ಚಿತ್ರ: ಮಕ್ಕಳು ಬೆಳೆಯುತ್ತಾ ಹೋದಂತೆ ಹೆಚ್ಚಿನ ನೈತಿಕ ಬೆಳವಣಿಗೆಯನ್ನು ಪಡೆದು ಕೊಳ್ಳುತ್ತಾರೆ. ಈ ಚಿತ್ರದಲ್ಲಿರುವ ಮಕ್ಕಳು ಶಾಲೆಯ ಸಮುದಾಯ ಸೇವೆ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದಾರೆ.

ಸಮಾಜಪರ ನೈತಿಕ ವಿವೇಚನೆ: ಈ ಚಿಂತನೆಯು ಇನ್ನೊಬ್ಬರೊಂದಿಗೆ ಹಂಚಿ ಕೊಳ್ಳುವ ಸಹಾಯ ಮಾಡುವ ರಕ್ಷಿಸು ತನಗೆ ಕಷ್ಟವಾದರೂ ಇನ್ನೊಬ್ಬರ ಕಷ್ಟಕ್ಕೆ ಮಿಡುಕುವ ಭಾವವನ್ನು ವಿವರಿಸುತ್ತದೆ.

ಸಾಮಾಜಿಕ ವಲಯದ ಸಿದ್ಧಾಂತ

ನೀವೀಗ ಕಲಿತಿರುವಂತೆ ಫ್ರಾಯ್ಡ್, ಪಿಗೆಟ್ ಮತ್ತು ಕೋಲ್ಸ್‌ಬರ್ಗ್ ಎಲ್ಲರೂ ಮಕ್ಕಳ ಸರಿ ತಪ್ಪಿನ ಗ್ರಹಿಕೆಯ ಬಾಹ್ಯ ಪರಿಣಾಮಗಳ ಕುರಿತು ಚರ್ಚಿಸಿದ್ದಾರೆ. ಆದರೆ ನಾವೀಗಾಗಲೇ 9ನೇ ಅಧ್ಯಾಯದಲ್ಲಿ ಸೂಚಿಸಿರುವಂತೆ (ಪುಟ 320 ನೋಡಿರಿ). ಸಾಮಾಜಿಕ ವಲಯದೊಳಗಿನ ವಿದ್ಯಮಾನಗಳನ್ನು ಗುರುತಿಸಿದಾಗ ಇತರರ ನೋವು ನಲಿವುಗಳಿಗೆ ಸ್ಪಂದಿಸುವ ಮನೋಭಾವದ ಕುರಿತು ಖಚಿತ ಸುಳಿವುಗಳು ದೊರಕುತ್ತವೆ. ಅಭಿವೃದ್ಧಿ ಚಿಂತಕರು ಹಿಂದೆ ಗುರುತಿಸಿದ್ದಕ್ಕಿಂತಲೂ ಮುಂಚೆಯೇ ಪ್ರಶ್ನಿಸುವ ಮನೋಭಾವ ಇಲ್ಲಿ ರೂಪುಗೊಂಡಿದ್ದನ್ನೂ ಕೂಡ ಗಮನಿಸ ಬಹುದಾಗಿದೆ. (ತುರೀಲ್ 2010). ಈ ಸಂಶೋಧನೆಯಲ್ಲಿ ಮಕ್ಕಳು ಹಿರಿಯರ ಸೂಚನೆ ಮತ್ತು ಇತರರ ಒಳಿತಿಗೆ ಸ್ಪಂದಿಸುವ ಮನೋಭಾವ ಎರಡರ ನಡುವೆ ಎದುರಿಸುವ ಸಂಘರ್ಷಗಳು ಗುರುತಿಸಲ್ಪಟ್ಟಿವೆ. ಉದಾಹರಣೆಗೆ ಶಾಲೆಯ ಮೈದಾನದಲ್ಲಿ ಇಬ್ಬರು ಮಕ್ಕಳು ಹೋರಾಡುತ್ತಿರುವಾಗ ಸ್ನೇಹಿತರು ಆ ಹೋರಾಟವನ್ನು ನಿಲ್ಲಿಸುವಂತೆ ಹೇಳ ಬಹುದು. ಆದರೆ ಶಿಕ್ಷಕರು ಮಧ್ಯ ಪ್ರವೇಶಿಸ ಬೇಡಿ ಎನ್ನ ಬಹುದು. ಸಂಶೋಧಕರು ಗುರುತಿಸುವಂತೆ 5 ಅಥವಾ 6ನೇ ವಯಸ್ಸಿನ ಮಕ್ಕಳು ಸ್ನೇಹಿತರ ಸಲಹೆಗೇ ಮಾನ್ಯತೆ ನೀಡಿ ಶಿಕ್ಷಕರ ಮಾತನ್ನು ಮೀರಿ ಆ ಹೋರಾಟವನ್ನು ನಿಲ್ಲಿಸಲು ಪ್ರಯತ್ನಿಸುತ್ತಾರೆ. (ಲುಪ್ತ ಇತರರು 1995)

ಶಿಕ್ಷಕರ ಮಾತನ್ನು ಮೀರಿ ಸ್ನೇಹಿತರ ಮಾತಿಗೆ ಬೆಲೆಯನ್ನು ಕೊಡುವ ಮನೋಭಾವ ಶಿಕ್ಷಕರ ಅಧಿಕಾರಕ್ಕೆ ಮಹತ್ವ ನೀಡುವ ಕ್ರಮದ ಕೋರಿಯಾ, ಚೀನಾ ಮೊದಲಾದ ಬೇರೆ ಸಂಸ್ಕೃತಿಗಳಲ್ಲಿ ಕೂಡ ಕಂಡು ಬರುತ್ತದೆ. (ಕಿಮ್ 1998; ಹೆಲ್ವಿಗ್, ಯಂಗ್, ಟನ್, ಲಿಯು ಮತ್ತು ಷೋ, 2011). ಇದು ಮೇಲಿನವರ ಆದೇಶ, ನಿಯಮಗಳನ್ನು ಅನುಸರಿಸುವುದಕ್ಕಿಂತ ಅಪಾಯ ಮತ್ತು ಕ್ಷೇಮದ ಕುರಿತ ಕಾಳಜಿ ಮತ್ತು ನೈತಿಕ ನಡವಳಿಕೆಗೆ ಮಕ್ಕಳು ಮಹತ್ವ ನೀಡಿರುವುದನ್ನು ಸೂಚಿಸುತ್ತದೆ.) ಈ ಅಂಶವೇ ಎಲಿಯಟ್ ಟುರಿಯಲ್ ಮತ್ತು ಅವರ ಸಹೋದ್ಯೋಗಿಗಳು (2010) ನೈತಿಕ ವಿಷಯಗಳು ಮೇಲಿನವರ ಆದೇಶ ಪಾಲನೆ, ಸಾಮಾಜಿಕ ನಡವಳಿಕೆಗಳಿಗಿಂತ ಭಿನ್ನವಾದ ಅಂಶಗಳು ಎಂದು ಗುರುತಿಸಲು ಕಾರಣವಾಗಿದೆ.

ಶಾಲಾ ನಿಯಮಗಳ ಕುರಿತಂತೆ 5ರಿಂದ 11 ವರ್ಷದೊಳಗಿನ ಮಕ್ಕಳು ನೀಡಿದ ಎರಡು ಕಥೆಗಳನ್ನು ಇದಕ್ಕೆ ಉದಾಹರಣೆಯಾಗಿ ನೋಡ ಬಹುದು.(ಟುರಿಯಲ್, 1983 ಪುಟ 62). ಒಂದು ಕಥೆಯಲ್ಲಿ ಶಾಲೆಯಲ್ಲಿ ಬೇಸಿಗೆ ಇದ್ದಾಗ ಮೇಲುಡುಗೆಯನ್ನು ತೆಗೆಯುವ ಅಧಿಕಾರವನ್ನು ಮಕ್ಕಳಿಗೆ ನೀಡಲಾಗಿತ್ತು. (ಸಾಮಾಜಿಕ ನಡವಳಿಕೆ) ಇನ್ನೊಂದು ಕಥೆಯಲ್ಲಿ ಶಾಲೆಯಲ್ಲಿ ಮಕ್ಕಳಿಗೆ ಪರಸ್ಪರ ಹೊಡೆದಾಡಲು ಅವಕಾಶ ನೀಡಲಾಗಿತ್ತು. (ನೈತಿಕ ಸಂಗತಿ) ಸಂಶೋಧನೆಯಲ್ಲಿ ಆಯ್ದ ಮಗುವನ್ನು ಮೇಲುಡಿಗೆ ತೆಗೆಯಲು ಅವಕಾಶ ನೀಡಿದ್ದು ಸರಿಯೇ ಎಂದು ಕೇಳಿದಾಗ ದೊರೆತ ಉತ್ತರವೆಂದರೆ

ಹೌದು, ಏಕೆಂದರೆ ಅದು ನಿಯಮ (ಈ ನಿಯಮ ಏಕಿರ ಬೇಕು) ಶಿಕ್ಷಕರು ನಿರ್ಧರಿಸಿದರೆ ಹಾಗೆ ಮಾಡಲೇ ಬೇಕಾಗುತ್ತದೆ.(ಹೇಗೆ?) ಏಕೆಂದರೆ ಅವರು ಶಿಕ್ಷಕರು ಶಾಲೆಯ ಆಡಳಿತವನ್ನು ಹೊಂದಿರುವವರು.

ಇನ್ನೊಂದು ಮಗು ಶಿಕ್ಷಕರ ಅಧಿಕಾರದ ಕುರಿತು ಅನುಮಾನಗಳನ್ನು ಉಳ್ಳದ್ದು ಮಕ್ಕಳು ಹೊಡದಾಡಿ ಪರಸ್ಪರ ಹಾನಿ ಮಾಡಿ ಕೊಳ್ಳಲು ಅವಕಾಶ ನೀಡಿದ್ದು ಸರಿಯೇ ಎಂದು ಕೇಳಿದಾಗ

ಇಲ್ಲ, ಅದು ಹೇಗೆ ಸಾಧ್ಯ? (ಏಕಾಗ ಬಾರದು) ಏಕೆಂದರೆ ಇದು ಮಕ್ಕಳಲ್ಲಿ ವೈಮನಸ್ಸಕ್ಕೆ ಕಾರಣವಾಗುತ್ತದೆ. ಮಕ್ಕಳು ಪರಸ್ಪರ ಹಾನಿ ಮಾಡಿ ಕೊಳ್ಳುವುದು ಸರಿಯಾದ ಕ್ರಮವಲ್ಲ.

ಕಳೆದ ಹಲವಾರು ದಶಕಗಳಿಂದ ನೂರಕ್ಕಿಂತ ಹೆಚ್ಚು ಅಧ್ಯಯನಗಳು ಹೇಗೆ ವರ್ತಿಸ ಬೇಕು ಎನ್ನುವ ಅಂಶ ಬಂದಾಗ ನೈತಿಕ ಪರಿಧಿ ಮತ್ತು ಸಾಮಾಜಿಕ ಸಂಪ್ರದಾಯದ ಪರಿಧಿಗಳ ನಡುವಿನ ವ್ಯತ್ಯಾಸವನ್ನು ಮಕ್ಕಳು ಅರಿಯ ಬಲ್ಲರು ಎನ್ನುವುದನ್ನು ಗುರುತಿಸಿವೆ. (ಕಿಲಿನ್‌ನಲ್ಲಿ ಪರಾಮರ್ಶೆ, ಮ್ಯಾಗ್ಲೋಥಿನ್ ಮತ್ತು ಲೀ ಕಿಂ 2002, ನುಸಿ

(Nucci) 2009) ಕ್ರಮೇಣ ಸಂಶೋಧಕರು ಈ ಎರಡೂ ಪರಿಧಿಗಳಲ್ಲಿ ಮಕ್ಕಳು ತಮ್ಮ ಅರಿವನ್ನು ಹೇಗೆ ಬಳಸಿ ಕೊಳ್ಳುತ್ತಾರೆ ಎಂಬುದನ್ನು ಗುರುತಿಸಿದರು. ಎರಡರಲ್ಲಿಯೂ ಅರಿವಿನ ಸ್ವರೂಪ ಭಿನ್ನವಾಗಿದ್ದರೂ ಕೂಡ ಅದು ಮೂರ್ತತೆಯಿಂದ ಅಮೂರ್ತತೆಯೆಡೆಗೆ ಚಲಿಸುತ್ತದೆ ಎನ್ನುವುದು ಖಚಿತವಾಗಿತ್ತು.

ನೈತಿಕ ಪರಿಧಿಯ ನೆಲೆಗೆ ಬಂದಾಗ ಚಿಕ್ಕ ಮಕ್ಕಳ ತೀರ್ಮಾನಗಳು ತಮಗೆ ಉಂಟಾಗ ಬಹುದಾದ ಹಾನಿ, ದೊರಕ ಬಹುದಾದ ಲಾಭ ಮೊದಲಾದ ವ್ಯಕ್ತಿಗತ ಅಂಶಗಳನ್ನು ಗಮನದಲ್ಲಿರಿಸಿರುತ್ತದೆ. ಬೆಳೆಯುತ್ತಾ ಹೋದಂತೆ ಹದಿಹರಯದ ಹತ್ತಿರ ಬಂದಂತೆ ಅಥವಾ ತಲುಪಿದಂತೆ ನ್ಯಾಯ ಮತ್ತು ಹಕ್ಕುಗಳ ಅಮೂರ್ತ ಪರಿಕಲ್ಪನೆಗಳನ್ನು ಬಳಸಿ ಕೊಳ್ಳುತ್ತಾರೆ. ಮಕ್ಕಳು ಯಾವುದೇ ವಯಸ್ಸಿನಲ್ಲಿಯೂ ನೈತಿಕ ಪ್ರಪಾತಗಳಾದ ಹೊಡೆಯುವುದು ಅಥವಾ ಕದಿಯುವುದನ್ನು ಸಮರ್ಥಿಸಲಾರರು. ಹಿರಿಯರ ಮಾತು, ಸಮಾಜದ ಆಚರಣೆ ಅವರಿಗೆ ಅರಿವಿಲ್ಲದಂತೆಯೇ ಇಂತಹ ನೈತಿಕತೆಯನ್ನು ಬೆಳೆಸಿರುತ್ತದೆ. ಹೊಡೆಯುವುದು ಉದಾಹರಣೆಗೆ ಯಾವುದೇ ನಿಯಮವಿಲ್ಲದಿದ್ದರೂ ಮಕ್ಕಳಿಗೆ ತಪ್ಪು ಎಂದು ಗೊತ್ತಿರುತ್ತದೆ. ಶಾಲೆಯಲ್ಲಿ ಪ್ರಾಂಶುಪಾಲರು ಅದಕ್ಕೆ ಅನುಮತಿ ನೀಡಿದರೂ ಕೂಡ ಅದನ್ನು ಮಕ್ಕಳು ಅನುಸರಿಸುವುದಿಲ್ಲ. ಹೊಡೆಯುವುದು ಮಕ್ಕಳ ಸಹಜ ಪ್ರವೃತ್ತಿಯಾಗಿದ್ದರೂ ಕೂಡ ಅವರಲ್ಲಿ ಬೆಳೆದ ನೈತಿಕತೆ ಅದಕ್ಕೆ ತಡೆಯನ್ನು ಉಂಟು ಮಾಡುತ್ತದೆ.

ನೈತಿಕ ಪರಿಧಿಯ ನಿರ್ಣಯಗಳಿಗೆ ವಿಲೋಮವಾಗಿ ಸಾಮಾಜಿಕ ಪದ್ಧತಿಗಳಾದ ನಿಯಮ, ಅಧಿಕಾರ, ಸಂಪ್ರದಾಯಗಳ ಅರಿವು ಭಿನ್ನವಾಗಿರುತ್ತದೆ. ವಯಸ್ಸಾದಂತೆ ಸಾಮಾಜಿಕ ರೀತಿ ನೀತಿಗಳಿಗೆ ಮಕ್ಕಳು ಹೆಚ್ಚಿನ ಒತ್ತನ್ನು ನೀಡುತ್ತಾರೆ. ಉದಾಹರಣೆಗೆ ಚಿಕ್ಕ ಮಕ್ಕಳು ತಮ್ಮ ಶಿಕ್ಷಕರನ್ನು ಏಕ ವಚನದಲ್ಲಿ ಕರೆಯುವುದು ತಪ್ಪು ಎಂದು ವಾದಿಸ ಬಹುದು. ಏಕೆಂದರೆ ಅದು ನಿಯಮಕ್ಕೆ ವಿರುದ್ಧ ಎನ್ನುವುದು ಅವರು ನೀಡುವ ಕಾರಣ. ಆದರೆ ಬೆಳೆದಂತೆ ಹಾಗೆ ಮಾಡಿದರೆ ಶಿಕ್ಷಕರನ್ನು ತಮಗೆ ಸಮಾನರಾಗಿ ನೋಡಿದಂತಾಗುತ್ತದೆ ಅವರು ನಮ್ಮ ನಿರ್ಣಾಯಕರು ಎನ್ನುವ ಅಂಶ ಗಮನಕ್ಕೆ ಬರುತ್ತದೆ. (ಟುರೀಲ್, 1983). ಮಧ್ಯ ಬಾಲ್ಯಾವಸ್ಥೆಯಲ್ಲಿ ಮಕ್ಕಳು ತಮ್ಮ ಸಾಮಾಜಿಕ ಗುಂಪುಗಳೆಡೆ ಹೆಚ್ಚು ಆಕರ್ಷಿತರಾಗಿ ಅಲ್ಲಿನ ಅಗತ್ಯಗಳಿಗೆ ತಕ್ಕಂತೆ ವರ್ತಿಸುತ್ತಾರೆ. (ಕಿಲ್ಲಿನ್ ಮತ್ತು ಸ್ಮೀತ್ನಾ, 2010) ಈ ಅಧ್ಯಾಯದಲ್ಲಿಯೇ ನಂತರ ನಿಮ್ಮ ಅರಿವಿಗೆ ಬರುವಂತೆ ಬೆಳೆಯುತ್ತಾ ಹೋದಂತೆ ಸಮಾಜಿಕ ರೀತಿ ನೀತಿಗಳಿಗೆ ಅನುಗುಣವಾಗಿ ಬದಲಾಗುವ ಮಕ್ಕಳ ಅರಿವು ಆತ್ಮೀಯ ವಲಯದ ನಿರ್ಧಾರ, ಸಾಮಾಜಿಕ ಸಂಬಂಧಗಳ ನಿರ್ವಹಣೆ ಮೊದಲಾದ ಅಂಶಗಳಿಗೆ ನೆರವಾಗುತ್ತದೆ.

ಅಭಿವೃದ್ಧಿ ಮನಶಾಸ್ತ್ರಜ್ಞರ ನಡುವಿನ ಈಗಿನ ಚರ್ಚೆ ಎಂದರೆ ನೈತಿಕ ಪರಿಧಿ ಮತ್ತು ಸಾಮಾಜಿಕ ಪರಿಧಿಗಳ ಸಾಂಸ್ಕೃತಿಕ ನೆಲೆಗಳ ನಡುವೆ ನೈತಿಕತೆಯ ಅರಿವಿನ ವ್ಯತ್ಯಾಸವನ್ನು ಯಾರು ನಡೆಸ ಬೇಕು ಎನ್ನುವುದಾಗಿದೆ. ಟುರೀಯಲ್‌ರ ಸಾಂಸ್ಕೃತಿಕ ಅಧ್ಯಯನದ ಸಾಂಸ್ಕೃತಿಕ ಪರಿಧಿಯನ್ನು ಗುರುತಿಸಿದಾಗ ಅಪಾರ ವೈವಿಧ್ಯಮಯ ಚಿತ್ರಣಗಳು ದೊರಕುತ್ತವೆ. ಇದನ್ನು ಬಳಸಿ ಸಂಶೋಧಕರು ಬೇರೆ ಬೇರೆ ಸಂಸ್ಕೃತಿಗಳಲ್ಲಿ ಗುರುತಿಸಿದ್ದಾರೆ. (ಇದನ್ನು ಟುರಿಲ್ ಸಂಗ್ರಹಿಸಿದ್ದಾರೆ, 1998). ಬೇರೆ ಸಂಶೋಧಕರು, ವಿಭಿನ್ನ ಮಾದರಿಗಳಿಂದ ಫಲಿತಾಂಶವನ್ನು ಪಡೆಯಲು ಪ್ರಯತ್ನಿಸಿದ್ದಾರೆ. ಇಲ್ಲಿ ಗ್ರಹಿಕೆಯಲ್ಲಿಯೇ ಮೂಲಭೂತ ವ್ಯತ್ಯಾಸಗಳಿರುವುದು ಗಮನಕ್ಕೆ ಬಂದಿದೆ. ಉತ್ತರ ಅಮೆರಿಕಾದಲ್ಲಿ ಸಾಮಾಜಿಕ ಪದ್ದತಿ ಎಂದು ಗ್ರಹಿತವಾದದ್ದು ಬೇರೆ ಸಮಾಜದಲ್ಲಿ ನೈತಿಕ ವಸ್ತವಾಗಿರುತ್ತದೆ. ಈ ಅಂಶವನ್ನು ವಿಭಿನ್ನ ಸಂಸ್ಕೃತಿಯ ನಡುವಿನ ಪ್ರಶ್ನೆಯಾಗಿ ಅಧ್ಯಾಯ 14ರಲ್ಲಿ ಗಮನಿಸೋಣ. ಏಕೆಂದರೆ ದೊರೆತ ಫಲಿತಾಂಶವು ಹೆಚ್ಚಾಗಿ ವಯಸ್ಕರ ಕುರಿತಾಗಿಯೇ ಇದೆ.

ನೈತಿಕ ಅರಿವು ಮತ್ತು ಮನಸ್ಸಿನ ಕುರಿತ ಸಿದ್ದಾಂತಗಳು

ನೈತಿಕ ಅರಿವನ್ನು ಗುರುತಿಸುವ ಇನ್ನೊಂದು ನೆಲೆ ಎಂದರೆ ಇದು ಬೇರೆ ಬೇರೆ ಅಭಿವೃದ್ಧಿ ನೆಲೆಗಳೊಂದಿಗೆ ತಾದ್ಯಾತ್ಮ ಸಂಬಂಧವನ್ನು ಹೊಂದಿದೆ ಎಂಬುದರ ಚರ್ಚೆ. ನೀವು ಅಧ್ಯಾಯ 8ರಲ್ಲಿ 4ರಿಂದ 5 ವರ್ಷದೊಳಗೆ ಮಕ್ಕಳ ಮನಸ್ಸು ಬೆಳವಣಿಗೆಯನ್ನು ಹೊಂದುತ್ತದೆ. ಬೇರೆಯವರ ಮನಸ್ಸಿನ ಕುರಿತು ಚಿಂತಿಸುವ ಶಕ್ತಿಯನ್ನು ಪಡೆಯುತ್ತಾರೆ ಎಂಬುದನ್ನು ಗಮನಿಸಿದ್ದೀರಿ. ಕ್ರಿಮಿನಲ್ ಕಟ್ಲೆಗಳಿಗೆ ಸಂಬಂಧಿಸಿದಂತೆಯೂ ನ್ಯಾಯಾದೀಶರು ಅಪರಾಧಿಯ ಮನಸ್ಥಿತಿಯನ್ನು ಅರ್ಥ ಮಾಡಿ ಕೊಳ್ಳಲು ಪ್ರಯತ್ನಿಸುತ್ತಾರೆ. ಅವನು ಅಥವಾ ಅವಳು ಇಂತಹ ಅಪರಾಧವನ್ನು ಮಾಡಲು ಕಾರಣವೇನು ಇದು ಪೂರ್ವ ನಿರ್ಧರಿತವೇ? ಅದರ ಹಿಂದಿನ ಉದ್ದೇಶವೇನು? ಎಂಬುದನ್ನೆಲ್ಲಾ ಅವರು ಗುರುತಿಸುತ್ತಾರೆ. ಇದನ್ನು ಆಧರಿಸಿ ಸಂಶೋಧಕರು ಗುರುತಿಸುವಂತೆ ಮಕ್ಕಳು ಒಬ್ಬ ವ್ಯಕ್ತಿಯ ನೈತಿಕತೆಯನ್ನು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಅರ್ಥ ಮಾಡಿ ಕೊಳ್ಳುತ್ತಾರೆ. ಬ್ರಯಾನ್ ಸೋಕೋಲ್ ಮತ್ತು ಮೈಕಲ್ ಚಾಂಡ್ಲರ್ (2004) ಪಂಚ್ ಮತ್ತು ಜ್ಯೂಲಿ ಗೊಂಬೆಯಾಟವನ್ನು ಬಳಸಿದ ತಮ್ಮ ಪ್ರಯೋಗದ ಮೂಲಕ ಗುರುತಿಸಿದ್ದಾರೆ. ಪಂಚ್ ಮತ್ತು ಜ್ಯೂಲಿ ಸೂತ್ರದ ಮೂಲಕ ಆಡಿಸ ಬಲ್ಲ ಗೊಂಬೆಗಳಾಗಿದ್ದು ಈ ಗೊಂಬೆಗಳನ್ನು ಮಕ್ಕಳು ಹೆಚ್ಚಾಗಿ ಭೇಟಿ ನೀಡುವ ಕಾರ್ನವಾಲ್ಸ್, ಅಮ್ಯೂಸ್‌ಮೆಂಟ್ ಪಾರ್ಕ್‌ಗಳಲ್ಲಿ ರೂಪಿಸಲಾಗುತ್ತದೆ. ಈ ಎರಡೂ ಗೊಂಬೆಗಳೂ ಪರಸ್ಪರರ ವಿರುದ್ದ ಸೆಣಸುವ ಅಯಶಸ್ವಿ ಪ್ರಯತ್ನವನ್ನು ಮಾಡುತ್ತಲೇ ಇರುತ್ತವೆ.

ಈ ಕುರಿತ ಎರಡು ಸನ್ನಿವೇಶಗಳನ್ನು ಸೋಕೋಲ್ ಮತ್ತು ಚಾಂಡ್ಲರ್ ಗುರುತಿಸಿ ಅಧ್ಯಯನವನ್ನು ನಡೆಸಿದ್ದಾರೆ.

ಸನ್ನಿವೇಶ 1: ಪಂಚ್ ಮತ್ತು ಜೂಡಿ ಎರಡು ದೊಡ್ಡ ಪೆಟ್ಟಿಗೆಗಳೊಂದಿಗೆ ರಂಗದ ಮೇಲೆ ಇದ್ದಾರೆ. ಒಂದು ಕಿತ್ತಳೆ ಬಣ್ಣದ್ದು ಇನ್ನೊಂದು ಹಸಿರು ಬಣ್ಣದ್ದು. ಪಂಚ್ ಮತ್ತು ಜೂಡಿ ಈ ಪೆಟ್ಟಿಗೆಗಳಿಗೆ ಕಿತ್ತಳೆ ಹಣ್ಣನ್ನು ತುಂಬುವುದರಲ್ಲಿ ನಿರತರಾಗಿದ್ದಾರೆ. ಒಂದು ಹಂತದಲ್ಲಿ ಪಂಚ್ ರಂಗವನ್ನು ಕೆಲವು ಸಮಯದ ಮಟ್ಟಿಗೆ ತೊರೆದಿರುತ್ತಾನೆ. ಅವನು ಹೊರಟು ಹೋದ ಸಮಯದಲ್ಲಿ ಜ್ಯೂಡಿ ಅಯ ತಪ್ಪಿ ಹಣ್ಣುಗಳು ತುಂಬಿದ ಕಿತ್ತಳೆ ಬಣ್ಣದ ಪೆಟ್ಟಿಗೆಯಲ್ಲಿ ಬೀಳುತ್ತಾಳೆ. 'ಕಾಪಾಡಿ' ಎಂದು ಅವಳು ಕೂಗಿ ಕೊಳ್ಳುತ್ತಾಳೆ. 'ನಾನು ಕಿತ್ತಳೆ ಬಣ್ಣದ ಪೆಟ್ಟಿಗಯಲ್ಲಿ ಬಿದ್ದಿದ್ದೇನೆ'. ಪಂಚ್ ಓಡಿ ಬರುತ್ತಾನೆ. ಜೂಡಿಯ ಸಹವಾಸದಿಂದ ಶಾಶ್ವತವಾಗಿ ದೂರವಾಗುವ ಈ ಸುವರ್ಣ ಅವಕಾಶವನ್ನು ಬಿಡಬಾರದು ಎಂದು ಕಿತ್ತಳೆ ಹಣ್ಣುಗಳು ತುಂಬಿದ ಹಸಿರು ಪೆಟ್ಟಿಗೆಯನ್ನು ರಂಗದ ಅಂಚಿಗೆ ತಳ್ಳುತ್ತಾನೆ.

ಸನ್ನಿವೇಶ 2: ಪಂಚ್ ಮತ್ತು ಜೂಡಿ ಮತ್ತೆ ರಂಗದ ಮೇಲೆ ಪೆಟ್ಟಿಗೆಗಳ ಜೊತೆಗೆ ಮರಳಿ ಬಂದಿದ್ದಾರೆ. ಒಂದು ಹಸಿರು ಬಣ್ಣದ್ದು ಇನ್ನೊಂದು ಬಿಳಿ ಬಣ್ಣದ್ದು ದೊಡ್ಡ ಆಕಾರದಲ್ಲಿ ಹಸಿರು ಬಣ್ಣದಲ್ಲಿ '1'ಎಂಬು ಬರೆದಿರುವಂತಹದು. ಮತ್ತೊಮ್ಮೆ ಪಂಚ್ ಅಲ್ಪ ಕಾಲಕ್ಕಾಗಿ ರಂಗವನ್ನು ತೊರೆಯುತ್ತಾನೆ. ಜೂಡಿ ಮತ್ತೆ ಆಕಸ್ಮಿಕವಾಗಿ ಅಯ ತಪ್ಪಿ ಬೀಳುತ್ತಾಳೆ. ಈ ಸಲ ಅವಳು ಹಸಿರು ಬಣ್ಣದ ಪೆಟ್ಟಿಗೆಯಲ್ಲಿ ಬಿದ್ದಿದ್ದಾಳೆ. ಸಹಾಯಕ್ಕಾಗಿ ಕೂಗುತ್ತಾ 'ಚೆಕ್ ದಿ ಗ್ರೀನ್ ಒನ್' ಎನ್ನುತ್ತಾಳೆ. ಈ ಸಲ ಪಂಚ್ ನಿಜವಾಗಿಯೂ ಅವಳಿಗೆ ನೆರವಾಗಲು ಬಯಸುತ್ತಾನೆ. ಆದರೆ ಅವಳು 'ಗ್ರೀನ್ ಒನ್'ಎಂದು ಕೂಗಿದ್ದನ್ನು. ಹಸಿರು ಬಣ್ಣದಿಂದ '1'ನ್ನು ಬರೆದಿರುವುದು ಎಂದು ತಪ್ಪು ತಿಳಿದು ಕೊಳ್ಳುತ್ತಾನೆ. ಹೀಗಾಗಿ ಜೂಡಿ ಬಿದ್ದಿದ್ದ ಹಸಿರು ಪೆಟ್ಟಿಗೆಯನ್ನು ಮೂಲೆಗೆ ತಳ್ಳಿ ಹಸಿರು ಬಣ್ಣದಲ್ಲಿ ಒಂದನ್ನು ಬರೆದಿರುವ ಪೆಟ್ಟಿಗೆಯ ಕಡೆಗೆ ಧಾವಿಸುತ್ತಾನೆ.

ಮಕ್ಕಳನ್ನು ಮೇಲಿನ ಎರಡು ಸನ್ನಿವೇಶಗಳಲ್ಲಿ ಯಾವುದರಲ್ಲಿ ಪಂಚ್ 'ಕೆಟ್ಟವನು' ಎನ್ನಿಸಿ ಕೊಳ್ಳುತ್ತಾನೆ ಎಂದು ಕೇಳಿದಾಗ ಚಿಕ್ಕ ಮಕ್ಕಳು ಎರಡನೇ ಸನ್ನಿವೇಶವನ್ನೇ ಗುರುತಿಸಿದರು. ಏಕೆಂದರೆ ಇಲ್ಲಿ ಅವನು ಪೆಟ್ಟಿಗೆಯನ್ನು ಮೂಲೆಗೆ ತಳ್ಳಿ ಜೂಡಿಯನ್ನು ಸಂಕಷ್ಟಕ್ಕೆ ಸಿಲುಕಿಸಿದ್ದ. ಕೊಂಚ ದೊಡ್ಡ ಮಕ್ಕಳು ಮೊದಲ ಸನ್ನಿವೇಶದ ಉದಾಹರಣೆಯನ್ನು ಹೇಳಿದರು. ಸೂಕಲ್ ಮತ್ತು. ಚಾಂಡ್ಲರ್ ಇದನ್ನು ನಿರಪೇಕ್ಷ ಹೊಣೆಗಾರಿಕೆ ಎಂದು ಸನ್ನಿವೇಶಕ್ಕೆ ತಕ್ಕಂತಹ ಹೊಣೆಗಾರಿಕೆ ಮತ್ತು ಸಾಪೇಕ್ಷ ಹೊಣೆಗಾರಿಕೆ ಎಂದರೆ ಉದ್ದೇಶ ಪೂರ್ವಕವಾಗಿ ನಡೆಸುವ ಕೃತ್ಯದ ಹೊಣೆಗಾರಿಕೆ ಎಂದು ವಿಶ್ಲೇಷಿಸುತ್ತಾರೆ. ಬೆಳೆಯುತ್ತಾ ಹೋದಂತೆ ಮಕ್ಕಳು ಪಂಚ್‌ನ ಉದ್ದೇಶವನ್ನು ಗುರುತಿಸಿ ಅದಕ್ಕೆ ಸಾಪೇಕ್ಷವಾಗಿ

ಹೊಣೆಗಾರಿಕೆಯನ್ನು ನಿರ್ವಹಿಸ ಬಲ್ಲವರಾಗಿರುತ್ತಾರೆ. ಹೀಗಾಗಿ ಮೊದಲನೆಯ ಸನ್ನಿವೇಶದಲ್ಲಿಯೇ ಪಂಚ್ ದೋಷಿ ಎಂದು ಅವರು ನಿಖರವಾಗಿ ಗುರುತಿಸುತ್ತಾರೆ.

ಹೀಗಾಗಿ ಬೆಳೆಯುತ್ತಾ ಹೋದಂತೆ ಮಕ್ಕಳು ಹೆಚ್ಚು ಸ್ಪಷ್ಟವಾಗಿ ವ್ಯಕ್ತಿಯ ಉದ್ದೇಶವನ್ನು ಅರಿತು ಹೊಣೆಗಾರಿಕೆಯನ್ನು ಗುರುತಿಸ ಬಲ್ಲವರಾಗುತ್ತಾರೆ. ಮಕ್ಕಳ ಮನಸ್ಸಿನ ಕುರಿತು ಹೆಚ್ಚಿನ ಅಧ್ಯಯನಗಳು ಈ ಕಾರಣಕ್ಕಾಗಿ ನಡೆಯ ಬೇಕಾಗಿದೆ. ಸೋಕಲ್ ಮತ್ತು ಚಾಂಡ್ಲರ್ ಈ ಬದಲಾವಣೆಗೆ ಪರ್ಯಾಯ ಆಯ್ಕೆಗಳನ್ನೂ ಕೂಡ ನೀಡುತ್ತಾರೆ. ಪಿಗೆಟ್ ಮತ್ತು ಕೋಲ್‌ಬರ್ಗ್ ಅನುಮೋದಿಸಿರುವಂತೆ ಮಕ್ಕಳು ಇಲ್ಲಿ ಅಂತರಿಕ ಉದ್ದೇಶಗಳಿಂದ ಬಾಹ್ಯ ಉದ್ದೇಶಗಳನ್ನು ಅರ್ಥ ಮಾಡಿ ಕೊಳ್ಳುವ ಕಡೆ ಚಲಿಸುತ್ತಿರುತ್ತಾರೆ.

ಅನ್ವಯಿಸು: ಸಂಪರ್ಕ ಕಲ್ಪಿಸು

: ಚರ್ಚಿಸು.

ಅಧ್ಯಯನದ ತೀವ್ರತೆಯನ್ನು ಅನೇಕ ಪ್ರೌಢಶಾಲೆ ಮತ್ತು ಕಾಲೇಜುಗಳಲ್ಲಿ ಒತ್ತಡದ ಅಂಶವನ್ನಾಗಿ ಗುರುತಿಸುತ್ತಾರೆ. ಈ ಕುರಿತು ನಿಮ್ಮ ಶಾಲೆಯಲ್ಲಿನ ಅಭಿಪ್ರಾಯವನ್ನು ದಾಖಲಿಸಿ

ಈ ಒತ್ತಡವು ನೈತಿಕವೇ ಸಾಮಾಜಿವೇ ಎನ್ನುವುದನ್ನು ಗುರುತಿಸಿ.

ನಿರಪೇಕ್ಷ ಹೊಣೆಗಾರಿಕೆ ಎಂದು ಸನ್ನಿವೇಶಕ್ಕೆ ತಕ್ಕಂತಹ ಹೊಣೆಗಾರಿಕೆ ಮತ್ತು ಸಾಪೇಕ್ಷ ಹೊಣೆಗಾರಿಕೆ ಎಂದರೆ ಉದ್ದೇಶ ಪೂರ್ವಕವಾಗಿ ನಡೆಸುವ ಕೃತ್ಯದ ಹೊಣೆಗಾರಿಕೆ